

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SK NEWS ಕನ್ನಡ

SIHI KAHI
KANNADA DAILY MORNING
BAGALKOT

Volume : 06 Issue : 291 Monday 08-04-2024 E-mail : maruti.b.hosamani76@gmail.com Page: 4 Price : Rs. 1/-


# ಬೆಲೆ ಬಾಳುವ ಸಂಪತ್ತು-ಸಮಯ

ಸಾಮಾನ್ಯ ಜೀವನದ ಅತ್ಯಮೂಲ್ಯ ಪದವೆಂದರೆ ಸಮಯ. ಒಬ್ಬ ವ್ಯಕ್ತಿಯ ಹುಟ್ಟಿನಿಂದ ಅವನ ಅಥವಾ ಅವಳ ಕೊನೆಯ ಉಸಿರು ಇರುವವರೆಗೂ ಬರುವ ಏಕೈಕ ಪದವಾಗಿದೆ. ಸಮಯವು ಹಣಕ್ಕಿಂತ ಹೆಚ್ಚು ಏಕೆಂದರೆ ಖರ್ಚು ಮಾಡಿದ ಹಣವನ್ನು ಮತ್ತೆ ಗಳಿಸಬಹುದು ಆದರೆ ಒಮ್ಮೆ ಕಳೆದ ಸಮಯವನ್ನು ಎಂದಿಗೂ ಗಳಿಸಲಾಗುವುದಿಲ್ಲ. ಸಮಯ ಪ್ರತಿಯೊಬ್ಬರ ಜೀವನ ನಡೆಸಲು ಅವಶ್ಯಕ ಮತ್ತು ಅನಿವಾರ್ಯವಾಗಿದೆ. ಸಮಯವು ಸಾಧನೆಗೆ ಜೀವವಿದ್ದಂತೆ.

ಈ ಭೂಮಿಯ ಮೇಲೆ ಅತಿ ಹೆಚ್ಚು ಬೆಲೆ ಬಾಳುವ ಸಂಪತ್ತು ಯಾವುದಾದರೂ ಇದ್ದರೆ ಅದು ಸಮಯ. ಕೆಲವರು ಹೇಳುವ ಹಾಗೆ ಸಮಯದಲ್ಲಿ ಕೆಟ್ಟ ಸಮಯ ಮತ್ತು ಒಳ್ಳೆಯ ಸಮಯ ಎಂಬ ಭಿನ್ನವಿಲ್ಲ. ನಾವು ಸಮಯವನ್ನು ಆ ರೀತಿ ತಿಳಿದುಕೊಂಡಿದ್ದೇವೆ ಅಷ್ಟೇ. ಸಮಯವು ಯಾರ ಮನೆಯ ಸ್ವತ್ತಲ್ಲ, ಅದು ಯಾರಿಗಾಗಿಯೂ ಕಾಯುವುದಿಲ್ಲ. ಸಮಯವು ಸಾಧಕನ ಸ್ವತ್ತು ವಿನಹ ಸೋಮಾರಿಯ ಸ್ವತ್ತಲ್ಲ. ಸಮಯವನ್ನು ಯಾರು ಪ್ರಾಮಾಣಿಕವಾಗಿ ಗೌರವಿಸುತ್ತಾರೋ ಅವರನ್ನು ಇಡೀ ಸಮಾಜವೇ ಗೌರವಿಸುತ್ತದೆ. ಕೆಲವೊಮ್ಮೆ ಒಂದೊಂದು ದಿನ ನಮಗೆ ಸಮಯ ಹೆಚ್ಚು ಇರುತ್ತದೆ ಇನ್ನೂ ಕೆಲವೊಮ್ಮೆ ಸಮಯವೇ ಇರುವುದಿಲ್ಲ. ಸಮಯದ ಅಭಾವ ಆ ಕ್ಷಣಕ್ಕೆ ಬಹಳ ಕಾಡುತ್ತದೆ. ಸಮಯ ಎಂಬುದು ಬಿಟ್ಟ ಬಾಣ ಅದು ಎಂದಿಗೂ ಮರಳಿಬಾರದು. ನಮಗಾಗಿ ಇರುವ ಸಮಯದಲ್ಲಿಯೇ ನಾವು ನಮ್ಮ ಕೆಲಸ ಕಾರ್ಯಗಳನ್ನು ಪೂರೈಸಿಕೊಂಡು ನಮ್ಮ ಗುರಿ ತಲುಪಬೇಕು. ಸಮಯಕ್ಕೆ ಬೆಲೆ ಕೊಡದ ವ್ಯಕ್ತಿಗೆ ಬದುಕಿನಲ್ಲಿ ಬೆಲೆ ಕೂಡ ಕಡಿಮೆ ಆಗುವುದು. ಸಮಯದ ಮಹತ್ವವನ್ನು ತಿಳಿದುಕೊಂಡು ನಡೆದಾಗ ಮಾತ್ರ ಅದು ಬದುಕಿನ ಪಾಠವನ್ನು ನಮಗೆ ತಿಳಿಸುವುದು.





ಈ ಭೂಮಿಯ ಮೇಲೆ ಯಾರು ಎಷ್ಟೇ ಶ್ರೀಮಂತರಿದ್ದರು ಕಳೆದುಹೋದ ಸಮಯವನ್ನು ಮರಳಿ ಪಡೆಯುವಷ್ಟು ಶ್ರೀಮಂತರು ಈ ಭೂಮಿಯ ಮೇಲೆ ಯಾರು ಇಲ್ಲ. ಹಾಗಾಗಿ ಅತ್ಯಂತ ಶ್ರೀಮಂತಿಕೆಯಿಂದ ತುಂಬಿದ ಸಮಯವನ್ನ ನಾವೆಲ್ಲರೂ ಪ್ರೀತಿಸೋಣ. ಬದುಕಿನ ಪಯಣದಲ್ಲಿ ಸಮಯ ಸಾಧಕರನ್ನು ನಂಬದೆ, ಸರಿಯಾದ ಸಮಯಕ್ಕೆ ಸಹಾಯ ಮಾಡುವ ಆತ್ಮೀಯರನ್ನು ನಂಬಿ ಬದುಕು ಸಾಗಿಸಬೇಕಾಗಿದೆ.ನಿನ್ನೆಯ ಸಮಯ ಮುಗಿದುಹೋಗಿದೆ, ನಾಳೆಯ ಸಮಯ ನಮ್ಮದಲ್ಲ, ಇವತ್ತಿನ ಸಮಯ ಮಾತ್ರ ನಮ್ಮದು. ಅದರಲ್ಲಿಯೇ ಇವತ್ತಿನ ದಿನದ ಈ ಕ್ಷಣ ಮಾತ್ರ ನಮ್ಮದು. ಹಾಗಾಗಿ ಸಮಯ ಬಹಳ ಅತ್ಯಮೂಲ್ಯವಾದುದು. ಮಿಂಚಿ ಹೋದ ಸಮಯಕ್ಕೆ ಚಿಂತಿಸಿ ಫಲವಿಲ್ಲ ಎಂಬಂತೆ ನಮಗಿರುವ ಈ ದಿನದ ಸಮಯವನ್ನು ಸರಿಯಾಗಿ ಬಳಸಿಕೊಳ್ಳಬೇಕು.

ಸಮಯ ಮೀರಿದ ಮೇಲೆ ಅದರ ಬಗ್ಗೆ ಚಿಂತಿಸಿದರೆ ಅದು ನಮ್ಮ ಮೂರ್ಖತನ. ಒಂದು ವರ್ಷದ ದೀರ್ಘ ಸಮಯಕ್ಕೂ ಕೂಡ ತನ್ನದೇ ಆದ ಮಹತ್ವವಿದೆ. ಅದೇ ರೀತಿ ಒಂದು ಸೆಕೆಂಡಿನ ಲಘು ಸಮಯಕ್ಕೂ ಕೂಡ ತನ್ನದೇ ಆದ ಮಹತ್ವವಿದೆ. ಸಮಯವನ್ನ ಆರಾಧಿಸೋಣ ಸಮಯವನ್ನ ಗೌರವಿಸೋಣ. ಭಗವಂತ ನಮಗಾಗಿ ನೀಡಿದ ಅಮೂಲ್ಯವಾದ ಸಂಪತ್ತಿನಲ್ಲಿ ಸಮಯ ಕೂಡ ಒಂದಾಗಿದೆ. ಸಮಯವನ್ನು ಅನಾವಶ್ಯಕ ಹಾಳು ಮಾಡದೆ ಸರಿಯಾಗಿ ಬಳಸಿಕೊಂಡು ಸಾಧಕರಾಗಿ ಉತ್ತಮ ಸಮಾಜದಲ್ಲಿ ಅತ್ಯುತ್ತಮ ನಾಗರಿಕರಾಗಿ ಬದುಕುವ ಒಂದು ಪ್ರಯತ್ನ ಮಾಡೋಣ. ಸಮಯದ ಬಗ್ಗೆ ಅರಿವು ಇಟ್ಟುಕೊಂಡು ಸಮಯ ಪಾಲಕರಾಗಿ ಬದುಕೋಣ.

ಹಣ, ಆಸ್ತಿ ಅಥವಾ ಇತರ ಪ್ರಮುಖ ವಸ್ತುಗಳಂತಹ ಕಳೆದುಹೋದ ಪ್ರತಿಯೊಂದು ವಸ್ತುವನ್ನು ಸಹ ಮತ್ತೆ ಜೀವಕ್ಕೆ ತರಬಹುದು. ಸಮಯ, ಕೇವಲ ಒಂದು ಬಾರಿ ಅಮೂಲ್ಯವಾದ ವಸ್ತುವಾಗಿದೆ, ಅದು ಹೋದ ನಂತರ ಅದು ಮತ್ತೆ ಕಂಡುಬರುವುದಿಲ್ಲ ನಮ್ಮ ಪ್ರತಿಯೊಂದು ಕ್ಷಣವು ಅಮೂಲ್ಯವಾದದು ಅದನ್ನು ಹಾಗೆ ವ್ಯರ್ಥ ಮಾಡಬೇಡಿ.

-ಶ್ರೀ ಮುತ್ತು. ಯ ವಡ್ಡರ
ಶಿಕ್ಷಕರು, ಬಾಗಲಕೋಟ
9845568484

# ಬೇವು ಬೆಲ್ಲದ ಸಂಭ್ರಮವೇ ಯುಗಾದಿ ಹಬ್ಬ




ಚೈತ್ರ ಮಾಸದಲ್ಲಿ ಬರುವ ಮೊದಲ ಹಬ್ಬ ಯುಗಾದಿ, ಹಿಂದೂ ಸಂಪ್ರದಾಯದ ಹೊಸ ವರ್ಷ ಯುಗಾದಿ ಹಬ್ಬ. ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತ್ತಿದೆ. ಹೊಸ ವರುಷಕ್ಕೆ ಹೊಸದು ಹೊಸದು ತರುತ್ತಿದೆ. ಈ ಯುಗಾದಿ ಹಬ್ಬ ನಮಗೆ ಮಾತ್ರವಲ್ಲ, ಪ್ರಕೃತಿಗೊ ಸಹ ಹೊಸ ವರುಷವಾಗಿರುತ್ತದೆ. ಚೈತ್ರ ಮಾಸದಿಂದ ಪ್ರಾರಂಭವಾಗುವ. ಈ ಮಾಸದಲ್ಲಿ ಮರ ಗಿಡಗಳು ಚಿಗರೊಡೆದು ಪ್ರಕೃತಿಯೂ ಅಚ್ಚ ಹಸಿರಿನಿಂದ ಕಂಗೊಳಿಸುತ್ತದೆ. ಬೇವು ಬೇಲ್ಲದ ಸಂಭ್ರಮವೇ ಈ ಯಗಾದಿ ಹಬ್ಬ ಮನೆಯಂಗಳದಲ್ಲಿ ಸಗಣಿ ಸಾರಿಸಿ ರಂಗೋಲಿ ಬಿಡಿಸಿ ಬಣ್ಣ ಮತ್ತು ಹೂವುಗಳಿಂದ ಅಲಂಕರಿಸಲಾಗುತ್ತದೆ. ಮನೆಯ ಹೊಸ್ತಿಲು ಮತ್ತು ದೇವರ ಕೋಣೆಯನ್ನು ಬೇವು ಮಾವಿನ ತಳಿರು ತೋರಣ ಮತ್ತು ಹೂವುಗಳಿಂದ ಅಲಂಕರಿಸುತ್ತಾರೆ. ಬೇವು ಬೇಲ್ಲ ವನ್ನು ತಿಂ-ದು ಹಿಂದಿನ ನೋವು ಮರೆತು ಸ್ನೇಹಿತರಿಗೆ ಯುಗಾದಿ ಹಬ್ಬದ ಶುಭಾಷಯಗಳನ್ನು ಹೇಳಿ ಯುಗಾದಿ ಹಬ್ಬ ಆಚರಿಸಲಾಗುತ್ತದೆ. ಕಳೆದ ವರ್ಷದ ಕಹಿ ಘಟನೆಗಳನ್ನು ಮರೆಯೋಣ, ಮತ್ತು ಸಿಹಿ ಘಟನೆಗಳನ್ನು ಸವಿಯೋಣ, ಎನ್ನುವ ಸಂದೇಶವನ್ನು ಯುಗಾದಿ ಹಬ್ಬವು ಬೇವು ಬೆಲ್ಲ ಹಂಚುವುದು ಮೂಲ ಉದ್ದೇಶ ಜೀವನದಲ್ಲಿ ಕಷ್ಟ ಸುಖಗಳು ಬರುತ್ತಲೇ ಇರುತ್ತವೆ. ಕಷ್ಟ ಬಂದಾಗ ಕುಗ್ಗದೆ ಸುಖ ಬಂದಾಗ ಹಿಗ್ಗದೆ ಸಮಾನವಾಗಿ ತೆಗೆದುಕೊಂಡು ಬಾಳ ಬೇಕೆಂಬುವ ಸಂಕೇತವನ್ನು ಯುಗಾದಿ ಹಬ್ಬ ಆಚರಣೆಯಿಂದ ತಿಳಿದು ಕೊಳ್ಳಬಹುದಾಗಿದೆ. ಬೇವಿನ ಎಲೆ, ಹೂವು ಮತ್ತು ಬೆಲ್ಲದ ತುರಿ ಜೊತೆಗೆ ಸ್ವಲ್ಪ ತುಪ್ಪ ಹಾಕಿ ಕಲಿಸಿದ ಮಿಶ್ರಣವೇ ಬೇವು ಬೆಲ್ಲ ಮನೆಯಲ್ಲಿ ದೇವರಿಗೆ ಪೂಜೆ ಮಾಡಿ ಬೇವು ಬೆಲ್ಲ ಮನೆಯವರೆಲ್ಲ ತಿನ್ನುತ್ತಾರೆ. ಸಾಯಂಕಾಲ ಪಂಚಾಂಗ ಓದುವ ಕಾರ್ಯಕ್ರಮ ಮನೆಯ ಹಿರಿಯರು ಅಥವಾ ದೇವಸ್ಥಾನದ ಅರ್ಚಕರು ಪಂಚಾಂಗ ಓದುವುದನ್ನು ಎಲ್ಲಾರೂ ಕೇಳಿಸಿ ಕೊಳ್ಳುತ್ತಾರೆ. ಈ ಬೇವು ಬೇಲ್ಲದ ಸಂಭ್ರಮವೇ ಯುಗಾದಿ ಹಬ್ಬ.

– ವಿ.ಎಂ.ಎಸ್. ಗೋಪಿ
ಲೇಖಕರು, ಸಾಹಿತಿಗಳು
ಬೆಂಗಳೂರು.
ಪೋ ನಂ– 9353611472

# ಕೊಪ್ಪಳ ಜಿಲ್ಲಾ ಘಟಕಕ್ಕೆ ಎನ್.ಎಂ. ದೊಡ್ಡಮನಿ ಅಧ್ಯಕ್ಷ

## ಸ್ಥಳೀಯ ಪತ್ರಿಕೆಗಳ ಬಲವರ್ಧನೆಗೆ ಅವಿರತ ಶ್ರಮ: ರಾಜ್ಯಾಧ್ಯಕ್ಷ ಎ.ಸಿ. ತಿಪ್ಪೇಸ್ವಾಮಿ

**ಕೊಪ್ಪಳ :** ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿರುವ ಸ್ಥಳೀಯ ಜಿಲ್ಲಾ ಮಟ್ಟದ ದಿನಪತ್ರಿಕೆಗಳ ಆರ್ಥಿಕ ಬಲವರ್ಧನೆಗೆ ಸಂಘಟಿತ ಹೋರಾಟದ ಅಗತ್ಯವಿದ್ದು, ಈ ಮೂಲಕ ನಮ್ಮ ಹಕ್ಕು ಪಡೆದುಕೊಳ್ಳಲು ಎಲ್ಲಾ ಜಿಲ್ಲಾ ಘಟಕಗಳು ನಮ್ಮೊಂದಿಗೆ ಕೈ ಜೋಡಿಸಲು ಮುಂದೆ ಬರಬೇಕು ಎಂದು ಕರ್ನಾಟಕ ಕಾರ್ಯನಿರತ ದಿನಪತ್ರಿಕೆಗಳ ಸಂಪಾದಕರ ಸಂಘದ ರಾಜ್ಯಾಧ್ಯಕ್ಷ ಎ.ಸಿ. ತಿಪ್ಪೇಸ್ವಾಮಿ ಕರೆ ನೀಡಿದರು.

ನಗರದ ಪತ್ರಿಕಾ ಭವನದಲ್ಲಿ ಗುರುವಾರ ಬೆಳಿಗ್ಗೆ ನಡೆದ ಕೊಪ್ಪಳ ಜಿಲ್ಲಾ ಘಟಕದ ಪದಾಧಿಕಾರಿಗಳನ್ನು ಆಯ್ಕೆ ಮಾಡುವ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸರ್ಕಾರದ ನಾನಾ ಇಲಾಖೆ ಸೇರಿದಂತೆ ಸಚಿವರು, ಶಾಸಕರು, ಸ್ಥಳೀಯ ಸುದ್ದಿಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಸ್ಥಳೀಯ ಜಿಲ್ಲಾ, ಪ್ರಾದೇಶಿಕ ಪತ್ರಿಕೆಗಳು ಪ್ರಕಟಿಸುತ್ತವೆ.

ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪಿಸುವಲ್ಲಿ ಸ್ಥಳೀಯ ಪತ್ರಿಕೆಗಳು ಪ್ರಮುಖ ಸಂಪರ್ಕ ಸೇತುವೆಗಳಾಗಿವೆ. ಆದರೆ ಪತ್ರಿಕೆಗಳಿಗೆ ಸರ್ಕಾರ ನೀಡುವ ಜಾಹೀರಾತಿನಲ್ಲಿ ತಾರತಮ್ಯವಾಗುತ್ತಿದ್ದು, ರಾಜ್ಯಮಟ್ಟದ ದಿನಪತ್ರಿಕೆಗಳಿಗೆ ಮಾತ್ರ ದೊಡ್ಡ ಪ್ರಮಾಣದ ಜಾಹೀರಾತು ಹೋಗುತ್ತಿವೆ.

ಆದರೆ ಸ್ಥಳೀಯ ಜಿಲ್ಲಾಮಟ್ಟದ ಪತ್ರಿಕೆಗಳು ಆರ್ಥಿಕವಾಗಿ ಸೊರಗುತ್ತಿರುವ ಹಿನ್ನೆಲೆ ನಮ್ಮ ನ್ಯಾಯೋಚಿತ ಬೇಡಿಕೆ ಈಡೇರಿಸಿಕೊಳ್ಳಲು ಇಡೀ ರಾಜ್ಯದಲ್ಲಿ ಒಂದು ಬಲವಾದ ಸಂಘಟನೆ ಕಟ್ಟುವ ಉದ್ದೇಶಕ್ಕೆ ಕಳೆದ ಮೂರು ತಿಂಗಳಿಂದ ರಾಜ್ಯದಾದ್ಯಂತ ಪ್ರವಾಸ ಮಾಡಿ ಜಿಲ್ಲಾ



ಘಟಕಗಳನ್ನು ರಚಿಸಲಾಗುತ್ತಿದೆ.

ಈ ಮೂಲಕ ರಾಜ್ಯಮಟ್ಟದಲ್ಲಿ ಸಂಘಟನೆಯು ಸಂಪಾದಕರಿಗೆ ಗಟ್ಟಿ ಧ್ವನಿಯಾಗಿ ಪ್ರತಿನಿಧಿಸುತ್ತದೆ. ಸರ್ಕಾರದಿಂದ ಹೆಚ್ಚು ಜಾಹೀರಾತು ಬಿಡುಗಡೆ, ದರ ಪರಿಷ್ಕರಣೆ, ಎರಡು ಪುಟಕ್ಕಾಗಿ ಐದು ವರ್ಷದ ಕಾಲಾವಧಿ ತೆಗೆದು ಹಾಕುವುದು, ಮಾಧ್ಯಮ ಪಟ್ಟಿಯಲ್ಲಿರುವ ಎಲ್ಲಾ ಸಮುದಾಯದ ಪತ್ರಿಕೆಗಳಿಗೆ ತಕ್ಷಣ ಒಂದು ಪುಟದ ಜಾಹೀರಾತು ಕೊಡುವುದು, ವಿಶೇಷ ಸಂದರ್ಭದಲ್ಲಿ ಪ್ರೋತ್ಸಾಹದ ರೂಪದ ಜಾಹೀರಾತು ಸೇರಿದಂತೆ ಹತ್ತಾರು ಬೇಡಿಕೆ ಈಡೇರಿಕೆಗಾಗಿ ನಿರಂತರ ಹೋರಾಟ ಮಾಡಲಾಗುವುದು ಎಂದರು.

ರಾಜ್ಯ ಉಪಾಧ್ಯಕ್ಷ ಮಂಜುನಾಥ ಅಬ್ಬಿಗೇರಿ ಮಾತನಾಡಿ, ಪತ್ರಿಕೆಗಳ ಸಂಪಾದಕರ ಸಾಕಷ್ಟು ಸಂಘಟನೆಗಳಿವೆ. ಇದೀಗ ಬಹುತೇಕ ಸಂಘಟನೆಗಳು ನಿಷ್ಕ್ರೀಯವಾಗಿ ಇರುವುದರಿಂದ ಸಂಪಾದಕರ ಮತ್ತು ಪತ್ರಿಕೆಗಳ ಸಮಸ್ಯೆಗಳನ್ನು ರಾಜ್ಯಮಟ್ಟದಲ್ಲಿ ಪ್ರತಿನಿಧಿಸುವ ಸಂಘಟನೆ ಕೊರತೆ ಹಿನ್ನೆಲೆ ನಮ್ಮ ಸಂಘಟನೆ ಅಸ್ತಿತ್ವಕ್ಕೆ ಬಂದಿದೆ. ಈಗಾಗಲೆ ರಾಜ್ಯದ 20ಕ್ಕೂ ಹೆಚ್ಚು ಜಿಲ್ಲಾ ಘಟಕ ರಚನೆಯಾಗಿದ್ದು, ಮುಂದಿನ ಜೂನ್ ಅಥವಾ ಜುಲೈ ತಿಂಗಳಲ್ಲಿ ಗದಗದಲ್ಲಿ ಸಂಘಟನೆಯಿಂದ ರಾಜ್ಯ ಮಟ್ಟದ ಸಮ್ಮೇಳನ ಮಾಡಿ ನಮ್ಮ ಸಮಸ್ಯೆಗಳ ಬಗ್ಗೆ ರಾಜ್ಯ ಸರ್ಕಾರದ ಗಮನ ಸೆಳೆಯುವ ಯತ್ನ ಮಾಡಲಾಗುವುದು ಎಂದರು.

ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಚನ್ನಬಸವ ಬಾಗಲವಾಡ ಮಾತನಾಡಿ, ಸಂಘಟನೆ ಅಸ್ತಿತ್ವಕ್ಕೆ ಬಂದಾಗಿನಿಂದಲೂ ಸ್ಥಳೀಯ ಪತ್ರಿಕೆಗಳ ಸಂಪಾದಕರ ಸಮಸ್ಯೆಗಳ ಕುರಿತು ಈಗಾಗಲೇ ವಾರ್ತಾ ಇಲಾಖೆಯ ಆಯುಕ್ತರಿಗೆ,ಸರ್ಕಾರಕ್ಕೆ, ಮುಖ್ಯಮಂತ್ರಿಯವರಿಗೆ ಹಲವು ಮನವಿ ಮಾಡಿ ಸಮಸ್ಯೆ ಪರಿಹಾರಕ್ಕೆ ಒತ್ತಾಯಿಸಲಾಗಿದೆ. ಮುಂದಿನ ದಿನಗಳಲ್ಲಿ ಸಂಘಟನೆಯನ್ನು ಬಲವಾಗಿ ಕಟ್ಟೋಣ ಎಂದರು.

ಕೊಪ್ಪಳ ಜಿಲ್ಲಾ ಘಟಕದ ಪರವಾಗಿ ಗಿರೀಶ್ ಕುಲಕರ್ಣಿ, ಎಚ್.ಎಸ್. ಹರೀಶ್ ಮಾತನಾಡಿದರು. ಹಿರಿಯ ಪತ್ರಕರ್ತರಾದ ಸಾಧಿಕ್ ಅಲಿ, ಸಿರಾಜ್ ಬಿಸರಳ್ಳಿ , ರಾಜ್ಯ ಸಂಘದ ಕಾರ್ಯದರ್ಶಿ ಮಿಯಾಸಾಬ್ ಕೊಡಗಲಿ ಸೇರಿದಂತೆ ನಾನಾ ಜಿಲ್ಲೆಯ ಪದಾಧಿಕಾರಿಗಳು ಈ ಸಂದರ್ಭದಲ್ಲಿ ಇದ್ದರು.

**ಕೊಪ್ಪಳ ಘಟಕ ರಚನೆ :**

ಕರ್ನಾಟಕ ಕಾರ್ಯನಿರತ ದಿನಪತ್ರಿಕೆಗಳ ಸಂಪಾದಕರ ಸಂಘದ ಕೊಪ್ಪಳ ಜಿಲ್ಲಾ ಘಟಕವನ್ನು ಇದೇ ಸಂದರ್ಭದಲ್ಲಿ ರಚಿಸಲಾಯಿತು.

ಎನ್.ಎನ್. ದೊಡ್ಡಮನಿ ಅಧ್ಯಕ್ಷ, ಎಸ್.ಎಂ. ಪಟೇಲ್, ಉಪಾಧ್ಯಕ್ಷ, ಶ್ರೀನಿವಾಸ ಎಂ.ಜೆ. ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದರು.

ಎಚ್.ಎಸ್. ಹರೀಶ್ ರಾಜ್ಯ ಪರಿಷತ್ತಿನ ಗೌರವ ಸಲಹೆಗಾರ, ವಿಶ್ವನಾಥ ಬೆಳಗಲ್ಮಠ ರಾಜ್ಯ ಪರಿಷತ್ತಿನ ಸದಸ್ಯ, ಗಿರೀಶ್ ಕುಲಕರ್ಣಿ ಕಲ್ಯಾಣ ಕರ್ನಾಟಕದ ವಿಭಾಗೀಯ ಕಾರ್ಯದರ್ಶಿ, ಬಸವರಾಜ ಗುಡ್ಲಾನೂರು ಕಲ್ಯಾಣ ಕರ್ನಾಟಕದ ವಿಭಾಗೀಯ ಸಂಚಾಲಕರನ್ನಾಗಿ ಇದೇ ಸಂದರ್ಭದಲ್ಲಿ ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಜಿಲ್ಲಾ ಘಟಕಕ್ಕೆ ವೀರಣ್ಣ ಕಳ್ಳಿಮನಿ ಖಜಾಂಚಿ, ಮಹಮ್ಮದ್ ಖಲೀಲ್ ಕಾರ್ಯದರ್ಶಿ, ವೈ. ನಾಗರಾಜ್ ಸಹ ಕಾರ್ಯದರ್ಶಿ, ಜಂಟಿ ಕಾರ್ಯದರ್ಶಿ ವೈ.ಬಿ. ಜೂಡಿ ಹಾಗೂ ಸಂಘಟನಾ ಕಾರ್ಯದರ್ಶಿ ಮೊಹಮ್ಮದ್ ಅಖಿಲ್ ಅವರನ್ನು ಆಯ್ಕೆ ಮಾಡಲಾಯಿತು.

ಮುಂದಿನ ದಿನಗಳಲ್ಲಿ ಜಿಲ್ಲಾ ಘಟಕದ ಪದಾಧಿಕಾರಿಗಳು ಸಭೆ ಸೇರಿ ಇತ-ರೆ ಬಾಕಿ ಇರುವ ಪದಾಧಿಕಾರಿಗಳನ್ನು ಆಯ್ಕೆ ಮಾಡುವುದು ಹಾಗೂ ಜಿಲ್ಲೆಯಲ್ಲಿ ಸಂಘಟನೆ ಬಲಗೊಳಿಸಲು ರಚನಾತ್ಮಕ ಚಟುವಟಿಕೆಯಲ್ಲಿ ತೊಡಗುವಂತೆ ರಾಜ್ಯಾಧ್ಯಕ್ಷ ಎ.ಸಿ. ತಿಪ್ಪೇಸ್ವಾಮಿ ಸಲಹೆ ನೀಡಿದರು.

# ಎಸ್.ಆರ್. ಕಂಠಿ ವೇದಿಕೆಯಿಂದ ವಿಶ್ವ ಮಹಿಳಾ ದಿನಾಚರಣೆ





**ಇಳಕಲ್ :** ನಗರದ ಎಸ್.ಆರ್. ಕಂಠಿ ವೇದಿಕೆಯಿಂದ ವಿಶ್ವ ಮಹಿಳಾ ದಿನಾಚರಣೆ ಹಾಗೂ ಮಹಿಳಾ ಕಾಯಕ ಜೀವಿಗಳಿಗೆ, ಪ್ರತಿಭಾ ಮತ್ತು ಸೇವಾ ಪ್ರತಿಭೆಗಳ ಗೌರವ ಸತ್ಕಾರ ಸಮಾರಂಭವು ಶ್ರೀ ವಿಜಯ ಮಹಾಂತೇಶ್ವರ ದಾಸೋಹ ಭವನದಲ್ಲಿ ಜರುಗಿತು.

ವಿಶೇಷ ಉಪನ್ಯಾಸ ನೀಡಿದ ಎಸ್.ಆರ್. ಕಂಠಿ ಶಿಕ್ಷಣ ಮಹಾವಿದ್ಯಾಲಯದ ಹಿರಿಯ ಉಪನ್ಯಾಸಕಿ ಅನ್ನಪೂರ್ಣ ಮಠ ಮಾತನಾಡಿ ಸಮಾಜದಲ್ಲಿ ಲಿಂಗ ತಾರತಮ್ಯ ತೊಲಗಬೇಕು. ಇಂದಿಗೂ ಕೃಷಿ, ಕೈಗಾರಿಕೆ ಮತ್ತು ಇತರ ಸೇವಾ ವಲಯಗಳಲ್ಲಿ ಮಹಿಳಾ ಕೂಲಿ ಕೆಲಸಗಾರರಿಗೆ ವೇತನ ನೀಡುವಲ್ಲಿ ತಾರತಮ್ಯ ಮಾಡಲಾಗುತ್ತಿದೆ. ಇದು ಬದಲಾಗಬೇಕು. ದುಡಿಯುವ ಹೆಣ್ಣು ಮತ್ತು ಗಂಡಿಗೂ ಒಂದೇ ರೀತಿಯಾದ ವೇತನ ನೀಡಬೇಕೆಂದು ಒತ್ತಾಯಿಸಿದರು. ಹೆಣ್ಣು ಭ್ರೂಣ ಹತ್ಯೆಯಿಂದ ಲಿಂಗಾನುಪಾತ ವ್ಯತ್ಯಾಸವಾಗುತ್ತಿರುವುದು ಗಂಭೀರ ಸಂಗತಿಯಾಗಿದೆ. ಇದರಿಂದ ಸಮಾಜದಲ್ಲಿ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ ಎಂದು ಹೇಳಿದರು.

ಮಾಜಿ ಮುಖ್ಯಮಂತ್ರಿ ಎಸ್.ಆರ್. ಕಂಠಿಯವರ ಪುತ್ರ ಡಾ. ಮಹೇಂದ್ರ ಕಂಠಿ ಮಾತನಾಡಿ ವಿಶ್ವದಲ್ಲಿ ಇಂದು ಮುಂದುವರೆದ ರಾಷ್ಟ್ರಗಳಲ್ಲಿ ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಭಾರತದಲ್ಲಿ ಕೂಡ ಮಹಿಳೆಯರಿಗೆ ಇನ್ನೂ ಹೆಚ್ಚಿನ ಅವಕಾಶಗಳು ದೊರೆಯಬೇಕು ಎಂದು ಅಭಿಪ್ರಾಯಪಟ್ಟರು.

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಡಾ. ವಿಶ್ವನಾಥ ವಂಶಾಕೃತಮಠ ಮಾತನಾಡಿ ಒಬ್ಬ ಮಹಿಳೆ ಶಿಕ್ಷಣ ಕಲಿತರೆ ಒಂದು ಶಾಲೆ ತೆರೆದಂತೆ. ಮಹಿಳೆಯರು ಅವಕಾಶಗಳನ್ನು ಬಳಸಿಕೊಂಡು ಎಲ್ಲ ಕ್ಷೇತ್ರಗಳಲ್ಲೂ ಬೆಳೆಯಬೇಕು.

ಒಂದು ಕಾಲದಲ್ಲಿ ಮಹಿಳಾ ಸಂಘಟನೆಗಳ ಕೊರತೆ ಇತ್ತು. ಆದರೆ ಇಂದು ಮಹಿಳಾ ಸಂಘಟನೆಗಳು ವಿಫುಲವಾಗಿ ಬೆಳೆದು ಕ್ರಿಯಾಶೀಲವಾಗಿ ಕಾರ್ಯ ಮಾಡುತ್ತಿರುವುದು ಹೆಮ್ಮೆಯ ಸಂಗತಿ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಖ್ಯಾತ ಅರ್ಥಶಾಸ್ತ್ರಜ್ಞ ಡಾ. ಮಹೇಂದ್ರ ಕಂಠಿ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಡಾ. ವಿಶ್ವನಾಥ ವಂಶಾಕೃತಮಠ, ಸ್ನೇಹರಂಗದ ಅಧ್ಯಕ್ಷ ಬಸವರಾಜ ಮಠದ, ಉಪನ್ಯಾಸಕಿ ಅನ್ನಪೂರ್ಣ ಮಠ, ಗೀತಾ ಕಂಠಿ, ಕಾಯಕ ಮಹಿಳಾ ಜೀವಿಗಳಾದ ಶಾಂತಮ್ಮ ಕುಂಬಾರ, ಪದ್ಮಾ ಗಂಜಿ, ಶಾಂತಮ್ಮ ಜಕೇರಿ, ಯಲ್ಲವ್ವ ಹಡಪದ, ಮಂಜುಳಾ ಹೂಗಾರ, ಹಿರಿಯ ಪತ್ರಕರ್ತ ಸಿ.ಸಿ. ಚಂದ್ರಾಪಟ್ಟಣ, ಇಳಕಲ್ ಬಣಜಿಗ ಸಂಘದ ಅಧ್ಯಕ್ಷ ಗಂಗಾಧರ ಶೆಟ್ಟರ, ಪ್ರತಿಭಾ ಮತ್ತು ಸೇವಾ ಅಡಿಯಲ್ಲಿ ಬೈಕ ಸಾಹಸಿ ವೀರಣ್ಣ ಕುಂದರಗಿಮಠ, ಶಿಕ್ಷಕ ವೀರೇಶ ಮುದಗಲ್ಲ, ಚಿತ್ರಕಲಾವಿದ ಚನ್ನಬಸವ ಹವಾಲ್ದಾರ, ಪ್ರತಿಭಾವಂತ ವಿದ್ಯಾರ್ಥಿನಿ ಐಶ್ವರ್ಯ ಕಂಠಿ, ಪ್ರತಿಭಾವಂತ ಕ್ರೀಡಾಪಟು ಅಭಿಷೇಕ ಗುಗ್ಗರಿ, ಕಂಠಿ ವೇದಿಕೆಯ ನೂತನ ಅಧ್ಯಕ್ಷ ವೀರಣ್ಣ ನಂದಾಪೂರ, ಪ್ರಧಾನ ಕಾರ್ಯದರ್ಶಿ ಬಸವರಾಜ ಅಂಗಡಿ, ಖಜಾಂಚಿ ಅಮರೇಶ ಕಕ್ಕಸಗೇರಿ ಇವರನ್ನು ಸತ್ಕರಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಶಕುಂತಲಾ ನಂದಾಪೂರ ವಹಿಸಿದ್ದರು. ಕಂಠಿ ವೇದಿಕೆಯ ನಿಕಟಪೂರ್ವ ಅಧ್ಯಕ್ಷೆ ವಿಜಯಲಕ್ಷ್ಮೀ ಲೆಕ್ಕಿಹಾಳ, ವೇದಿಕೆಯ ಸದಸ್ಯರಾದ ಶಿವಬಸಪ್ಪ ತೊಂತನಾಳ, ಅಮರೇಶ ಐಹೊಳ್ಳಿ, ಅಮರೇಶ ಕೊಡಕೇರಿ, ಅಡಿವೆಪ್ಪ ಅಂಗಡಿ, ಕಳಕಪ್ಪ ಅಂಗಡಿ, ಮಹಾಂತೇಶ ಹೂಲಗೇರಿ ಉಪಸ್ಥಿತರಿದ್ದರು. ನೀಲಮ್ಮ ಬಾದಿಮನಾಳ ಪ್ರಾರ್ಥಿಸಿದರು. ಶಿಲ್ಪಾ ಅಂಗಡಿ ಸ್ವಾಗತಿಸಿದರು.

ವಿಜಯಲಕ್ಷ್ಮೀ ಲೆಕ್ಕಿಹಾಳ ಪ್ರಾಸ್ಥಾವಿಕವಾಗಿ ಮಾತನಾಡಿದರು. ವಿಜಯಲಕ್ಷ್ಮೀ ಕಂಠಿ ನಿರೂಪಿಸಿದರು. ಶೈಲಾ ಪಟ್ಟಣಶೆಟ್ಟಿ, ಅನುರಾಧಾ ಪಟ್ಟಣಶೆಟ್ಟಿ, ಮೇಘಾ ಕಕ್ಕಸಗೇರಿ, ಅಕ್ಕಮ್ಮ ಕಕ್ಕಸಗೇರಿ ಪರಿಚಯಿಸಿದರು. ನೇತ್ರಾವತಿ ಅಂಗಡಿ ವಂದಿಸಿದರು.

# ಬಾಬು ಜಗಜೀವನ ರಾಮರವರ 117ನೇ ಜಯಂತ್ಯೋತ್ಸವ





**ಮುಧೋಳ :** ಹಸಿರು ಕ್ರಾಂತಿ ಹರಿಕಾರ,ಭಾರತದ ಮಾಜಿ ಉಪ ಪ್ರಧಾನಮಂತ್ರಿಗಳಾದ ಡಾ: ಬಾಬು ಜಗಜೀವನ್ ರಾಮ್ ರವರ 117ನೇ ಜನ್ಮ ಜಯಂತ್ಯೋತ್ಸವ ಕಾರ್ಯಕ್ರಮವನ್ನು ತಾಲೂಕ ಆಡಳಿತದ ವತಿಯಿಂದ ಲೋಕಸಭಾ ಸಾರ್ವತ್ರಿಕ ಚುನಾವಣೆ-2024 ರ ಮಾದರಿ ನೀತಿ ಸಂಹಿತೆಗೆ ಒಳಪಟ್ಟು ಸರಳವಾಗಿ ಆಚರಿಸಲಾಯಿತು.

ತಾಲೂಕುಮಟ್ಟದಎಲ್ಲಇಲಾಖೆಗಳಅಧಿಕಾರಿಗಳುಮುಧೋಳ ಬಸ್ ನಿಲ್ದಾಣದ ಹತ್ತಿರ ಇರುವ ಡಾ ಬಾಬು ಜಗಜೀವನರಾಮ್ ರವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಪೂಜೆ ಸಲ್ಲಿಸಿ ನಂತರ ತಹಶೀಲ್ದಾರರ ಕಾರ್ಯಾಲಯದಲ್ಲಿ ಡಾ ಬಾಬು ಜಗಜೀವನರಾಮ್ ರವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವುದರ ಮೂಲಕ ಜನ್ಮ ದಿನಾಚರಣೆಯನ್ನು ಆಚರಿಸಲಾಯಿತು.

ಮಾನ್ಯ ತಹಶೀಲ್ದಾರರು ಹಾಗೂ ತಾಲೂಕು ಮಟ್ಟದ ಜಯಂತಿ ಉತ್ಸವ ಸಮಿತಿ ಅಧ್ಯಕ್ಷರು ವಿನೋದ ಹತ್ತಳ್ಳಿ, ತಾಲೂಕ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳಾದ ವಿ.ಪಿ ಏಗನಗೌಡರ್, ಪೊಲೀಸ್ ವೃತ್ತ ನಿರೀಕ್ಷಕರಾದ ಆರ್.ಆರ್.ಪಾಟೀಲ್, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರಾದ ಮೋಹನ ಕೋರಡ್ಡಿ,

ನಗರಸಭೆ ಪೌರಾಯುಕ್ತರಾದ ಗೋಪಾಲ ಕಾಸೇ, ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಎಸ್.ಎಮ್.ಮುಲ್ಲಾ, ತಾಲೂಕು ಆರೋಗ್ಯಾಧಿಕಾರಿಗಳಾದ ವೆಂಕಟೇಶ್ ಮಲಘಾನ,ಪಿ.ಎಸ್.ಆಯ್ ಅಜೀತ ಹೊಸಮನಿ, ತಾಲೂಕು ನೌಕರರ ಸಂಘದ ಅಧ್ಯಕ್ಷರಾದ ರಮೇಶ್ ನೀಡೋಣಿ,ನೀರಾವರಿ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಅಧಿಕಾರಿಗಳಾದ ಎಚ್.ಆರ್.ಮಹಾರಡ್ಡಿ, ಸಣ್ಣ ನೀರಾವರಿ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಘವೇಂದ್ರ ಕಳ್ಳಿಮನಿ, ಸಿಡಿಪಿಓ ಕಾಶೀಬಾಯಿ ಕೋರೆವಗೋಳ, ಹಾಗೂ ಎಲ್ಲ ತಾಲೂಕು ಮಟ್ಟದ ಅಧಿಕಾರಿಗಳು, ಸಮುದಾಯದ ಮುಖಂಡರು ಹಾಗೂ ನಗರಸಭೆ ಮತ್ತು ಸಮಾಜ ಕಲ್ಯಾಣ ಇಲಾಖೆಯ ಸಿಬ್ಬಂದಿ ವರ್ಗದವರು ಹಾಜರಿದ್ದರು.

# ಯುವಕರಿಗೆ ಉದ್ಯೋಗ ಸೃಷ್ಟಿ ಮತ್ತು ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಕಾಂಗ್ರೆಸ್ ಅಭ್ಯರ್ಥಿಗೆ ಮತ ನೀಡಿ : ಲಕ್ಷ್ಮೀ ಹೆಬ್ಬಾಳ್ಕರ್

## ಲೋಕಸಭೆ ಚುನಾವಣೆ ಬಳಿಕ ಸರಕಾರ ಪತನಗೊಳ್ಳುತ್ತದೆ ಎಂಬುದು ವಿರೋಧ ಪಕ್ಷದವರ ಹಗಲು ಕನಸು



**ಬೆಳಗಾವಿ :** ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಪಕ್ಷ ಸುಭದ್ರವಾಗಿದೆ. ಕಳೆದ 10 ತಿಂಗಳಲ್ಲಿ ಜನರಿಗೆ ನೀಡಿದ ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸುವ ಮೂಲಕ ನುಡಿದಂತೆ ನಡೆದಿದ್ದೇವೆ. ಇನ್ನು ನಾಲ್ಕು ವರ್ಷಗಳ ಕಾಲ ಸರ್ಕಾರ ಸುಭದ್ರವಾಗಿರಲಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರಾದ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದ್ದಾರೆ.

ಸವದತ್ತಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಶಿಂದೋಗಿ, ಬಂಡಾರಹಳ್ಳಿ, ಹಿರೂರು ಹಾಗೂ ಹಳ್ಳೂರಿನಲ್ಲಿ ಸೋಮವಾರ ಚುನಾವಣಾ ಪ್ರಚಾರದಲ್ಲಿ ಮಾತನಾಡಿದ ಸಚಿವರು, ಲೋಕಸಭಾ ಚುನಾವಣೆ ಬಳಿಕ ಸರ್ಕಾರ ಬೀಳಲಿದೆ ಎಂದೆಲ್ಲಾ ಹಗಲು ಕನಸು ಕಾಣುತ್ತಿದ್ದಾರೆ. ಜನರು 135 ಶಾಸಕರನ್ನು ಆರಿಸಿ ಕಳುಹಿಸುವ ಮೂಲಕ ಕಾಂಗ್ರೆಸ್ ಪಕ್ಷಕ್ಕೆ ಸ್ಪಷ್ಟ ಬಹುಮತ ನೀಡಿದ್ದಾರೆ ಎಂದರು.

ಉದ್ಯೋಗ ಸೃಷ್ಟಿ :

ಬೆಳಗಾವಿ ಜಿಲ್ಲೆಯ ಯುವಕರಿಗೆ ಜಿಲ್ಲೆಯಲ್ಲೇ ಉದ್ಯೋಗ ಒದಗಿಸುವ ಯೋಜನೆಗಳನ್ನು ತರಲಾಗುವುದು. ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡಲಾಗುವುದು. ಕೊಟ್ಟ ಮಾತಿಗೆ ಚ್ಯುತಿ ಬರದಂತೆ ಕೆಲಸ ಮಾಡಲಾಗುವುದು ಎಂದು ಲಕ್ಷ್ಮೀ ಹೆಬ್ಬಾಳಕರ್ ತಿಳಿಸಿದರು. ಮೃಣಾಲ್ ಎಲ್ಲರ ಪ್ರತಿನಿಧಿಯಾಗಿ ಕೆಲಸ ಮಾಡಲಿದ್ದಾನೆ.

ಮೃಣಾಲ್ ಹೆಬ್ಬಾಳ್ಕರ್ ಯುವಕರು ಸೇರಿದಂತೆ ಎಲ್ಲರ ಪ್ರತಿನಿಧಿಯಾಗಿ ಸಂಸತ್‌ನಲ್ಲಿ ಧ್ವನಿ ಎತ್ತಲಿದ್ದಾನೆ. ಯುವಕರ ಪಾಲಿಗೆ ಗೆಳೆಯ, ಅಣ್ಣ, ತಮ್ಮ ಆಗಿ ಕೆಲಸ ಮಾಡಲಿದ್ದಾನೆ. ಕ್ಷೇತ್ರದ ಮಗನಿಗೆ ಆಶೀರ್ವಾದ ಮಾಡಿ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಮನವಿ ಮಾಡಿದರು.

ಲೋಕಸಭಾ ವ್ಯಾಪ್ತಿಯಲ್ಲಿ ಸುಮಾರು 2500 ಗ್ರಾಮಗಳಿದ್ದು, ಪ್ರತಿ ಗ್ರಾಮಕ್ಕೂ ಭೇಟಿ ಕೊಟ್ಟು ಸ್ಥಳೀಯರ ಸಮಸ್ಯೆ ಆಲಿಸಲಿದ್ದಾನೆ. ನಮ್ಮ ಕುಟುಂಬ ಸವದತ್ತಿ ಕ್ಷೇತ್ರದ ಜೊತೆ ಭಾವನಾತ್ಮಕ ನಂಟನ್ನು ಹೊಂದಿದೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವರಾದ ಸತೀಶ್ ಜಾರಕಿಹೊಳಿ ಅಶೀರ್ವಾದಿಂದ ಪ್ರಿಯಾಂಕ ಜಾರಕಿಹೊಳಿ ಚಿಕ್ಕೋಡಿ, ಮೃಣಾಲ್ ಹೆಬ್ಬಾಳ್ಕರ್ ಬೆಳಗಾವಿ ಕ್ಷೇತ್ರದಿಂದ ಕಣಕ್ಕಿಳಿದಿದ್ದಾರೆ. ಇಬ್ಬರೂ ಯುವ ಅಭ್ಯರ್ಥಿಗಳಾಗಿರುವುದರಿಂದ ನಮ್ಮ ಅಭ್ಯರ್ಥಿಗಳನ್ನು ಬೆಂಬಲಿಸಬೇಕು ಎಂದು ಕೋರಿದರು.

ಕಾಂಗ್ರೆಸ್ ಅಧಿಕಾರಕ್ಕೆ ಬರಬೇಕು ಎಂದು ಕಳೆದ ವರ್ಷ ಶೆಟ್ಟರ್ ನಮ್ಮ ಪಕ್ಷಕ್ಕೆ ಸೇರ್ಪಡೆಗೊಂಡರು. ವಿಧಾನಸಭೆ ಚುನಾವಣೆಯಲ್ಲಿ ಸೋತರೂ ಅವರ ಹಿರಿತನಕ್ಕೆ ಗೌರವ ನೀಡಿದ ಕಾಂಗ್ರೆಸ್ ವಿಧಾನ ಪರಿಷತ್ ಸದಸ್ಯರನ್ನಾಗಿ ಮಾಡಿತು. ಇದೀಗ ಪುನಃ ಬಿಜೆಪಿಗೆ ಜಾರಿಕೊಂಡರು. ಇಂತವರಿಗೆ ಜನರು ಸರಿಯಾದ ಪಾಠ ಕಲಿಸಬೇಕು ಎಂದು ಸಚಿವರು ಕರೆಕೊಟ್ಟರು.

ಅಭ್ಯರ್ಥಿ ಮೃಣಾಲ್ ಹೆಬ್ಬಾಳಕರ್ ಮಾತನಾಡಿ, ಕ್ಷೇತ್ರವನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸಬೇಕೆನ್ನುವ ಕನಸು ಹೊತ್ತು ಚುನಾವಣೆಗೆ ಸ್ಪರ್ಧಿಸಿದ್ದೇನೆ. ವಿಶೇಷವಾಗಿ ಯುವಕರಿಗೆ ಜಿಲ್ಲೆಯಲ್ಲೇ ಉದ್ಯೋಗಾವಕಾಶಗಳನ್ನು ಕಲ್ಪಿಸುವ ಉದ್ದೇಶ ಹೊಂದಿದ್ದೇನೆ. ಉದ್ಯೋಗದ ಜೊತೆಗೆ ಯುವಕರನ್ನು ಉದ್ಯಮಿಗಳನ್ನಾಗಿಸಲು ಒತ್ತು ನೀಡಲಾಗುವುದು ಎಂದರು. ಸಚಿವರೊಂದಿಗೆ ಚುನಾವಣಾ ಪ್ರಚಾರದಲ್ಲಿ ಸವದತ್ತಿ ಶಾಸಕ ವಿಶ್ವಾಸ ವೈದ್ಯ, ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ, ಅಭ್ಯರ್ಥಿ ಮೃಣಾಲ ಹೆಬ್ಬಾಳಕರ್, ಡಿ.ಡಿ.ಟೋಪೋಜಿ ಸೇರಿದಂತೆ ಅಪಾರ ಸಂಖ್ಯೆ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಉಪಸ್ಥಿತರಿದ್ದರು.

# ಮಂಗಲಾ ಅಕ್ಕನವರಿಗೆ ರಾಜಕೀಯ ಅನುಭವ ಇಲ್ಲ: ಲಕ್ಷ್ಮೀ ಹೆಬ್ಬಾಳ್ಕರ

**ಬೆಳಗಾವಿ :** ಹಾಲಿ ಬಿಜೆಪಿ ಸಂಸದೆ ಮಂಗಲಾ ಅಂಗಡಿ ಅವರಿಗೆ ರಾಜಕೀಯ ಅನುಭವ ಕಡಿಮೆ ಇದೆ. ನಾನು ಜಿಲ್ಲಾ ಕಾಂಗ್ರೆಸ್ ನಾಯಕರ ಕಡೆಗಣಿಸಿ ಸಚಿವೆಯಾಗಿದ್ದಲ್ಲ. ಮಹಿಳಾ ಕೋಟಾದಡಿಯಲ್ಲಿ ನಾನು ಸಚಿವೆಯಾಗಿದ್ದು ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.



ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದರು. ಮಂಗಲಾ ಅಂಗಡಿ ಅವರು ದಿ. ಸುರೇಶ್ ಅಂಗಡಿ ಅವರ ಅಕಾಲಿಕ ನಿಧನದ ಬಳಿಕ ಉಪಚುನಾವಣೆಯಲ್ಲಿ ಕೇವಲ ಮೂರು ಸಾವಿರ ಮತಗಳಿಂದ ಗೆಲುವು ಸಾಧಿಸಿ ಸಂಸತ್ತನ್ನು ಪ್ರವೇಶ ಮಾಡಿದವರು. ಅವರಿಗೆ ಪಾಪ ರಾಜಕೀಯ ಅನುಭವ ಕಡಿಮೆ ಇದೆ. ಕೇಂದ್ರದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಮಹಿಳಾ ಮೀಸಲಾತಿ ಬಗ್ಗೆ ಮಾತನಾಡುತ್ತಾರೆ. ಮಂಡ್ಯದಲ್ಲಿ ಸುಮಲತಾ ಹಾಗೂ ಬೆಳಗಾವಿಯಲ್ಲಿ ಮಂಗಲಾ ಅಂಗಡಿ ಅವರಿಗೆ ಟಿಕೆಟ್ ಕೊಟ್ಟಿಲ್ಲ. ಮಂಗಲಾ ಅವರಿಗೆ ಬೀಗರು ಟಿಕೆಟ್ ತಪ್ಪಿಸಿದರು ಎಂದು ಜನ ಹೇಳುತ್ತಿದ್ದಾರೆ ನಾನು ಹೇಳುತ್ತಿಲ್ಲ. ಮಂಗಲಾ ಅಕ್ಕನವರಿಗೆ ಯಾರೋ ಬರೆದುಕೊಟ್ಟಿದ್ದನ್ನು ಹೇಳಿರಬೇಕು ಎಂದರು.

ಬಿಜೆಪಿಯಲ್ಲಿ ಹಾಲಿ ಸಂಸದೆ ಮಂಗಲಾ ಅಂಗಡಿ ಅವರ ತರುವಾಯ ಬೇರೆಯವರಿಗೆ ಟಿಕೆಟ್ ಕೊಡುವುದಿದ್ದರೇ ಸ್ಥಳೀಯ ಬಿಜೆಪಿ ನಾಯಕರಿಗೆ ಟಿಕೆಟ್ ನೀಡಬೇಕಿತ್ತು. ಸಹೋದರಿ ಮಂಗಲಾ ಅಂಗಡಿ ಅವರು ಇವರಿಗೆ ಬೆಂಬಲ ಸೂಚಿಸಬೇಕಿತ್ತು. ಆದರೆ ಅವರ ಬೀಗರಾದ ಜಗದೀಶ್ ಶೆಟ್ಟರ್ ಅವರಿಗೆ ಯಾಕೆ ಬೆಂಬಲಿಸಿದರು. ಪಕ್ಷದಲ್ಲಿ ಎಷ್ಟೋ ಜನ ಆಕಾಂಕ್ಷಿಗಳಿದ್ದರು. ಅವರಿಗೆ ಬೆಂಬಲಿಸಿದ್ದರೇ ನಾನು ಶಬ್ಬಾಶ್ ಎನ್ನುತ್ತಿದ್ದೆ. ಆದರೆ ಈಗ ಅವರು ನೀಡಿರುವ ಹೇಳಿಕೆ ಜನರ ದಿಕ್ಕು ತಪ್ಪಿಸುವುದಾಗಿದೆ ಎಂದುರು.

ಜಗದೀಶ್ ಶೆಟ್ಟರ್ ಅವರು ಬೆಳಗಾವಿ ನನ್ನ ಕರ್ಮಭೂಮಿ ಎಂದು ಹೇಳುತ್ತಿದ್ದಾರೆ. ಬೆಳಗಾವಿ ಜನರು ಅಷ್ಟೊಂದು ಮುಗ್ದರೆಂದು ತಿಳಿದಿದ್ದಾರಾ ಅವರು. ಇವರು ಎಲ್ಲೋ ಬಂದು ಏನೋ ಆಗಿ ಈಗ ಕರ್ಮಭೂಮಿ ಎನ್ನುವ ಅವರು ಮೊದಲು ಅವರ ವಿಳಾಸ ಎಲ್ಲಿದೆ ಎನ್ನುವುದನ್ನು ಹೇಳಲಿ. ಆಮೇಲೆ ಕರ್ಮಭೂಮಿ ಎಂದು ಹೇಳಲಿ ಎಂದು ವಾಗ್ದಾಳಿ ನಡೆಸಿದರು.

ಗೋಕಾಕ, ಅರಬಾವಿಯಲ್ಲಿ ಈ ಲೋಕಸಭಾ ಚುನಾವಣೆಯಲ್ಲಿ ಉತ್ತಮ ಫಲಿತಾಂಶ ಬರಲಿದೆ. ನಮ್ಮ ಗ್ಯಾರಂಟಿ ಯೋಜನೆಗಳು ನಮಗೆ ಲಾಭವಾಗುತ್ತದೆ. ಕಳೆದ 10 ವರ್ಷಗಳಿಂದ ಈ ಭಾಗದ ಸಂಸದರು ಮೋದಿ ಹೆಸರನ್ನು ಹೇಳಿ ಎಷ್ಟು ಅಭಿವೃದ್ಧಿ ಮಾಡಿದ್ದಾರೆ. ಬಿಜೆಪಿ ಸಂಸದರು ಇದ್ದು, 25 ವರ್ಷ ಆಗಿದೆ. ಅಭಿವೃದ್ಧಿ ಎಲ್ಲಿ ಆಗಿದೆ ಎಂದು ಪ್ರಶ್ನಿಸಿದ ಅವರು, ಮೋದಿ ಹೆಸರು ಹೇಳಿ ಗೆಲುವು ಸಾಧಿಸಿದ್ದಾರೆ. ಮೋದಿ ಅವರ ಬಳಿ ಹೋಗಿ ಬೆಳಗಾವಿಗೆ ಏನು ಕೊಡುಗೆ ಕೊಟ್ಟಿದ್ದಾರೆ ಎಂದರು.

ಬೆಳಗಾವಿಯಲ್ಲಿ ಪ್ರವಾಹದ ಸಂದರ್ಭದಲ್ಲಿ ಪರಿಹಾರ ಕೊಡಿಸಲು ಸಾಧ್ಯವಾಗಲಿಲ್ಲ. ಬಿಜೆಪಿ ಸಂಸದರಿಗೆ, ಯಾರಾದರೂ ಬಾಯಿ ಬಿಟ್ಟು ಬೆಳಗಾವಿಯಲ್ಲಿ ಪ್ರವಾಹ ಬಂದಿದೆ ಎಂದು ಹೇಳಿದರಾ ? ಬರಗಾಲದ ಪರಿಹಾರ ಕೊಡಿಸಿದರಾ ? ಮೋದಿ ಅವರ ಹೆಸರಿನಲ್ಲಿ ಆಯ್ಕೆಯಾಗಿ ಮೂಕರಾಗಿ, ಕಿವುಡರಾಗಿ ಇರುವ ಸಂಸದರು ನಮಗೆ ಬೇಕಾ ಎಂದರು.

ಸ್ಥಳೀಯ ಸಂಸದರಿಗೆ ಇಚ್ಛಾಶಕ್ತಿ ಬೇಕು. ಮೋದಿ ಅವರು ಬಂದು ಇಲ್ಲಿ ಅಭಿವೃದ್ಧಿ ಮಾಡಲು ಸಾಧ್ಯವಾಗಲ್ಲ. ನಮ್ಮ ಸರಕಾರದ ಪಂಚ ಗ್ಯಾರಂಟಿ ಯೋಜನೆಯಿಂದ ಜನರಿಗೆ ಸಾಕಷ್ಟು ಅನುಕೂಲವಾಗಿದೆ. ಮತದಾರರು ತುಲನೆ ಮಾಡುತ್ತಾರೆ. ಯಾರಿಗೆ ಮತ ಹಾಕಬೇಕು ಎನ್ನುವುದನ್ನು ನಿರ್ಧರಿಸುತ್ತಾರೆ ಎಂದರು.

# ಐಗಳಿ ಮಾಣಿಕಪ್ರಭು ದೇವರ ಜಾತ್ರೆ, ಭಾವೈಕ್ಯತೆಯ ಪ್ರತಿರೂಪ: ಡೊಂಗರಗಾಂವ

**ಅಥಣಿ :** ಜಾತ್ರೆಗಳು ಭಾವೈಕ್ಯತೆಯ ಪ್ರತಿರೂಪಗಳು ಸಮಾಜದಲ್ಲಿ ಭಾವೈಕ್ಯತೆ ಇರಬೇಕು, ಸಂವಿಧಾನದಲ್ಲೂ ಇದಕ್ಕೆ ಒತ್ತು ನೀಡಿದೆ. ಭಾವೈಕ್ಯತೆಗೆ ಹೆಸರಾದ ಐಗಳಿಯ ಮಾಣಿಕಪ್ರಭು ದೇವರ ಜಾತ್ರೆಯಲ್ಲಿ ಎಲ್ಲರೂ ಸಮಾನರೂ ಎಂಬುದಕ್ಕೆ ನಾನೇ ಸಾಕ್ಷಿ. ಇಲ್ಲಿ ವಿಶ್ವಗುರು ಬಸವಣ್ಣನವರ ತತ್ವ ಸಿದ್ಧಾಂತಗಳನ್ನು ಉಳಿಸಿಕೊಂಡು ಬಂದಿದ್ದಾರೆ ಎಂದು ಮಾಜಿ ಶಾಸಕ ಶಹಾಜಹಾನ ಡೊಂಗರಗಾಂವ ಹೇಳಿದರು.



ಅವರು ತಾಲೂಕಿನ ಐಗಳಿ ಗ್ರಾಮದಲ್ಲಿ ನಡೆಯುತ್ತಿರುವ ಮಾಣಿಕಪ್ರಭು ದೇವರ ಜಾತ್ರೆಯ 3ನೇ ದಿನದ ಶಿವಾನುಭವ ಗೋಷ್ಠಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. 30 ವರ್ಷದ ಹಿಂದೆ ಈ ಜಾತ್ರೆಯಲ್ಲಿ ಕೇವಲ 30–40 ಜಾನುವಾರುಗಳು ಸೇರುತ್ತಿದ್ದವು. ಈಗ ಲಕ್ಷಾಂತರ ಜಾನುವಾರುಗಳು ಸೇರುತ್ತಿದ್ದು, ಇದೆಲ್ಲ ಲಿಂ.ರಾಚೋಟೇಶ್ವರ ಸ್ವಾಮಿಗಳ ತಪಸ್ಸಿನ ಪ್ರಭಾವ. ಬರಗಾಲ ಇರುವುದರಿಂದ ರೈತರು ಜಾನುವಾರುಗಳನ್ನು ಕಡಿಮೆ ದರದಲ್ಲಿ ಮಾರಾಟ ಮಾಡುತ್ತಿದ್ದಾರೆ. ನಿಜವಾಗಿಯೂ ರೈತರು ಸಂಕಷ್ಟದಲ್ಲಿದ್ದು, ಸರ್ಕಾರ ಸಮಗ್ರ ಕೃಷಿ ನೀತಿ ಪದ್ಧತಿ ಜಾರಿ ಮಾಡಬೇಕು. ರೈತರ ಬೆಳೆಗೆ ಬೆಂಬಲ ಬೆಲೆ ನೀಡಿ ಖರೀದಿಸಲು ಮುಂದಾಗಬೇಕು. ಬೇಸಿಗೆಯಲ್ಲಿ ನೀರಿನ ತೊಂದರೆಯಾಗಿದ್ದು, ಇಬ್ಬರೂ ಮಹಾತಪಸ್ವಿಗಳು ಬೇಗನೆ ಮಳೆರಾಯನನ್ನು ತರೆಸಿ ನೀರಿನ ಅಭಾವ ಕಡಿಮೆ ಮಾಡಬೇಕು ಎಂದು ಪ್ರಾರ್ಥಿಸಿದರು.

ಈ ವೇಳೆ ದುಮ್ಮವಾಡದ ಶ್ರೀ ಗುರು ಚೈತನ್ಯಾಶ್ರಮದ ಸರ್ಪಭೂಷಣ ದೇವರು ಮಾತನಾಡಿ, ಜಾತ್ರೆ, ಹಬ್ಬ, ಹರಿದಿನಗಳು ಅನಾದಿಕಾಲದಿಂದ ನಮ್ಮ ಸಂಪ್ರದಾಯಗಳಾಗಿವೆ. ತಂದೆಗಿಂತ ತಾಯಿಯ ತ್ಯಾಗ ಮನೋಭಾವ ದೊಡ್ಡದು. ತಾಯಿಯೇ ಮೊದಲು ಮಕ್ಕಳಿಗೆ ಸಂಸ್ಕಾರ ಕಲಿಸುತ್ತಾಳೆ. ಮಕ್ಕಳಿಗೆ ದೂರದರ್ಶನ ಮತ್ತು ಮೊಬೈಲ್‌ಗಳನ್ನು ಕೊಡಬೇಡಿ, ಗುಣಮಟ್ಟದ ಶಿಕ್ಷಣ ಕೊಡಿಸುವಂತೆ ಕಿವಿಮಾತು ಹೇಳಿದ ಅವರು

ಕಾರ್ಯಕ್ರಮದ ಅಧ್ಯಕ್ಷತೆಯನ್ನ ಅಭಿನವ ರಾಚೋಟೇಶ್ವರ ದೇವರು ವಹಿಸಿದ್ದರು.

ಈ ಸಂದರ್ಭದಲ್ಲಿ ಶಿವಬಸವ ದೇವರು, ಮಾತೋಶ್ರೀ ಪ್ರಮೀಳಾ ತಾಯಿ, ವಿಶ್ರಾಂತ ಪ್ರಾಚಾರ್ಯ ಎ.ಎಸ್ ನಾಯಿಕ, ಪತ್ರಕರ್ತ ಪ್ರಕಾಶ ಪೂಜಾರಿ ಮಾತನಾಡಿದರು.

ಈ ವೇಳೆ ಅಪ್ಪಾಸಾಬ ಪಾಟೀಲ, ಪಿಕೆಪಿಎಸ್ ಅಧ್ಯಕ್ಷ ರಾಮುಗೌಡ ಪಾಟೀಲ, ಬಸವರಾಜ ಬಿರಾದಾರ, ಅಣ್ಣಾರಾಯ ಹಾಲಳ್ಳಿ, ಸಿದ್ದಪ್ಪ ಬಳ್ಳೊಳ್ಳಿ, ಅಪ್ಪಾಸಾಬ ತೇರದಾಳ, ಭೈರಪ್ಪ ಹುಣಶಿಕಟ್ಟಿ, ಬಂದೇನವಾಜ ಮುಜಾವರ, ಕಮಿಟಿ ಅಧ್ಯಕ್ಷ ಪ್ರಲಾದ ಪಾಟೀಲ, ಗುರಪ್ಪ ಬಿರಾದಾರ, ಸದಾಶಿವ ಏಳ್ಳೂರ, ಭೈರಪ್ಪ ಬಿಜ್ಜರಗಿ ಸೇರಿ ಅನೇಕರಿದ್ದರು.

ಭಾರತ ಅನೇಕ ಧರ್ಮಗಳಿರುವ ವಿಶಿಷ್ಟ ದೇಶ, ಇಲ್ಲಿ ಎಲ್ಲರೂ ಸಹಬಾಳ್ವೆ ನಡೆಸಿದಾಗ ಬದುಕಿಗೆ ಅರ್ಥ ಬರುತ್ತದೆ. ಧಾರ್ಮಿಕವಾಗಿ. ಸಾಂಸ್ಕೃತಿಕವಾಗಿ ಜನರನ್ನು ತಲುಪಲು ಇಂತಹ ಜಾತ್ರಾ ಮಹೋತ್ಸವಗಳ ಆಚರಣೆ ಅಗತ್ಯ. ಜಾತ್ರಾ ಮಹೋತ್ಸವದ ಉದ್ದೇಶ ಜನರಿಗೆ ತಲುಪಿದರೆ ಜಾತ್ರೆ ಸಾರ್ಥಕತೆ ಕಾಣುತ್ತದೆ ಎಂದು ಮಾಜಿ ಶಾಸಕ ಶಹಾಜಹಾನ ಡೊಂಗರಗಾಂವ ಹೇಳಿದರು.

# ಲೋಕಸಭಾ ಚುನಾವಣೆ: ಛಾಯಾಗ್ರಹಣ ಸ್ಪರ್ಧೆ

**ಕೊಪ್ಪಳ :** ಲೋಕಸಭಾ ಸಾರ್ವತ್ರಿಕ ಚುನಾವಣೆ–2024ರ ಹಿನ್ನೆಲೆಯಲ್ಲಿ ಕರ್ನಾಟಕ ಮುಖ್ಯ ಚುನಾವಣಾಧಿಕಾರಿಗಳ ಕಾರ್ಯಾಲಯದಿಂದ ಛಾಯಾಗ್ರಹಣ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿದೆ. ಈ ಛಾಯಾಗ್ರಹಣ ಸ್ಪರ್ಧೆಯ ಮೂಲಕ ಪ್ರಜಾಪ್ರಭುತ್ವದ ವಿಶೇಷತೆ ಹಾಗೂ ವೈವಿಧ್ಯತೆಯನ್ನು ನಿಮ್ಮ ಲೆನ್ಸ್ ಮೂಲಕ ಸೆರೆಹಿಡಿದು ಆಕರ್ಷಕ ಬಹುಮಾನವನ್ನು ಗೆಲ್ಲುವ ಅವಕಾಶ ಕಲ್ಪಿಸಲಾಗಿದೆ. ಆಸಕ್ತರು ನಿಮ್ಮ ಛಾಯಾಚಿತ್ರಗಳನ್ನು ಇ–ಮೇಲ್ mediacellceokarnataka@gmail.com ಗೆ ಮೇ 15 ರ ಸಂಜೆ 5 ಗಂಟೆಯೊಳಗಾಗಿ ಕಳುಹಿಸಬೇಕು.

**ಸ್ಪರ್ಧಿಗಳ ಗಮನಕ್ಕೆ :**

ಪ್ರತೀ ಸ್ಪರ್ಧಿಯು ಕೂಡ ಗರಿಷ್ಠ 5 ಭಾವಚಿತ್ರಗಳನ್ನು ಸಲ್ಲಿಸಬಹುದು. ಪ್ರತಿ ಫೋಟೋ ಜೊತೆಗೆ ನಿಮ್ಮ ಪೂರ್ಣ ಹೆಸರು, ಸಂಪರ್ಕ ವಿವರಗಳು ಮತ್ತು ಸಂಕ್ಷಿಪ್ತ ವಿವರಣೆಯನ್ನು ಸೇರಿಸಿ, ಅದರ ಸಂದರ್ಭ, ಸ್ಥಳ ಮತ್ತು ದಿನಾಂಕವನ್ನು ಹೈಲೈಟ್ ಮಾಡಿ. ಪ್ರತೀ ಛಾಯಾಚಿತ್ರವೂ ಕೂಡ ಸ್ಪರ್ಧಿಗಳು ತಾವೇ ಕ್ಲಿಕ್ ಮಾಡಿರುವಂತಹ ಚಿತ್ರವಾಗಿರಬೇಕು.

ಜೆಪಿಇಜಿ ಅಥವಾ ಜೆಪಿಜಿ ಫಾರ್ಮ್ಯಾಟ್‌ನಲ್ಲಿರುವ ಡಿಜಿಟಲ್ ಛಾಯಾಚಿತ್ರಗಳನ್ನು ಮಾತ್ರ ಸ್ವೀಕರಿಸಲಾಗುವುದು. ಛಾಯಾಚಿತ್ರದ ಸೈಜ್ 20 ಎಂಬಿ ಮೀರಿರಬಾರದು. ಛಾಯಾಚಿತ್ರದ ರೆಜಲೂಷನ್ ಕನಿಷ್ಠ 300 ಡಿಪಿಐ ಇರಬೇಕು. ಹಾರಿಜಂಟಲ್ (Horizontal) ಚಿತ್ರಗಳಿಗೆ ವಿಡ್ತ್ (Width) ಹಾಗೂ ವರ್ಟಿಕಲ್ (Vertical) ಚಿತ್ರಗಳಿಗೆ ಹೈಟ್ (Height) ಕನಿಷ್ಠ 1,600 ಪಿಕ್ಸೆಲ್ (Pixel)ಗಳು ಇರುವುದು ಕಡ್ಡಾಯ. ಛಾಯಾಚಿತ್ರದ ಕ್ರಾಪಿಂಗ್, ಬಣ್ಣ ತಿದ್ದುಪಡಿಯನ್ನು ಮಾತ್ರ ಎಡಿಟ್ ಮಾಡಲು ಅನುಮತಿಸಲಾಗಿದೆ. ಮತದಾರರ ಭಾಗವಹಿಸುವಿಕೆ, ಮತದಾರರ ವೈವಿಧ್ಯತೆ ಮತ್ತು ಚುನಾವಣಾ ಕಾರ್ಯಕರ್ತರ ನಿವೇದನೆ ಸೇರಿದಂತೆ ಚುನಾವಣಾ ಪ್ರಕ್ರಿಯೆಗಳನ್ನು ಸೃಜನಾತ್ಮಕವಾಗಿ ಸೆರೆಹಿಡಿಯಬೇಕಾಗಿದೆ. ರಾಜಕೀಯ ಪಕ್ಷದ ಪ್ರಚಾರಗಳು, ಅಭ್ಯರ್ಥಿಗಳು ಅಥವಾ ಪಕ್ಷಪಾತವನ್ನು ಸೂಚಿಸುವ ಹಾಗೂ ಗುರುತಿಸಬಹುದಾದ ಚಿಹ್ನೆಗಳ ನೇರ ಚಿತ್ರಣಗಳನ್ನು ತಿರಸ್ಕರಿಸಲಾಗುವುದು. ಛಾಯಾಚಿತ್ರಗಳನ್ನು ಇಮೇಲ್ ಮಾಡುವಾಗ Democracy in Focus Photography Competition Submission ಅಂತ ನಿಮ್ಮ ಇಮೇಲ್ ನ ಸಬ್ಜೆಕ್ಟ್ ಇರಬೇಕು.

# ಬಯ್ಯಾಪುರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಇನ್ನಷ್ಟು ಬಲಿಷ್ಠಗೊಳ್ಳಲಿ

**ಕೊಪ್ಪಳ :** ಮಾಜಿ ಸಚಿವ ಹಿರಿಯ ಕಾಂಗ್ರೆಸ್ ಮುಖಂಡ ಅಮರೇಗೌಡ ಪಾಟೀಲ್ ಬಯ್ಯಾಪುರ ರವರು ಕಾಂಗ್ರೆಸ್ ಪಕ್ಷದ ಕೊಪ್ಪಳ ಜಿಲ್ಲಾ ಅಧ್ಯಕ್ಷರಾಗಿ ನೇಮಕಗೊಂಡಿರುವದು ಎಲ್ಲರಿಗೆ ಸಂತೋಷ ಉಂಟು ಮಾಡಿದೆ ಇವರ ಅಧ್ಯಕ್ಷತೆಯಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷ ಇನ್ನಷ್ಟು ಬಲಿಷ್ಠ ಗೊಳ್ಳಲಿ ಎಂದು ಡೊಳ್ಳಿನ ಸಂಘದ ಅಧ್ಯಕ್ಷ ಹಾಗೂ ಕಾಂಗ್ರೆಸ್ ಕಾರ್ಯಕರ್ತ ಗುಡದಪ್ಪ ಬಾನಪ್ಪ ನವರ ಹಲಗೇರಿ ಹರ್ಷ ವ್ಯಕ್ತಪಡಿಸಿ ಅಭಿನಂದಿಸಿದ್ದಾರೆ.



ಈ ಕುರಿತು ಹೇಳಿಕೆ ನೀಡಿದ ಅವರು ಅಮರೇಗೌಡ ಪಾಟೀಲ್ ಬಯ್ಯಾಪುರವರು ಒಬ್ಬ ಹಿರಿಯ ಅನುಭವಿ ರಾಜ–ಕಾರಣಿಯಾಗಿದ್ದು ಕೆಪಿಸಿಸಿ ಅವರು ಇವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಿರೋದು ಪಕ್ಷದ ಕಾರ್ಯಕರ್ತರಲ್ಲಿ ಹರ್ಷ ಹುಮ್ಮಸ್ಸು ಹೆಚ್ಚಿಸಿದೆ ನಡೆಯಲಿರುವ ಲೋಕಸಭಾ ಚುನಾವಣೆಯಲ್ಲಿ ಈ ಬಾರಿ ಕೊಪ್ಪಳ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಕೆ ರಾಜಶೇಖರ್ ಹಿಟ್ನಾಳ ಗೆಲ್ಲುವುದರಲ್ಲಿ ಯಾವುದೇ ಸಂದೇಹವಿಲ್ಲ ಎಂದು ಗುಡದಪ್ಪ ಬಾನಪ್ಪ ನವರಹಲಗೇರಿ ತಿಳಿಸಿದ್ದಾರೆ.

# ಅನಧಿಕೃತ ಮರಳು ಸಾಗಾಣಿಕೆದಾರರಿಗೆ ಎಚ್ಚರಿಕೆ

**ಕೊಪ್ಪಳ:** ಕೊಪ್ಪಳ ತಾಲ್ಲೂಕಿನ ಅಳವಂಡಿ ಹೋಬಳಿಯ ಕೇಸಲಾಪುರ, ಹಲವಾಗಲಿ, ನಿಲೋಗಿಪುರ, ಹಳೇನಿಲೋಗಿಪುರ ಮತ್ತು ತಿಗರಿ ಗ್ರಾಮ ವ್ಯಾಪ್ತಿಯ ತುಂಗಾಭದ್ರಾ ನದಿಯಲ್ಲಿ ಬೇಸಿಗೆ ನಿಮಿತ್ತ ನೀರಿನ ಹರಿವು ಕಡಿಮೆಯಾಗಿದ್ದು, ಮರಳಿನ ಸಂಚಯವಾಗಿದೆ. ನದಿ ಪಾತ್ರ ಮತ್ತು ತುಂಗಾಭದ್ರಾ ಜಲಾಶಯದ ಹಿನ್ನೀರಿನ ಪ್ರದೇಶದಲ್ಲಿ (ಕಡಿಂರಿಜಭಿಣ ಂಡಿಜಚಿ) ಅನಧಿಕೃತವಾಗಿ ಮರಳು ಗಣಿಗಾರಿಕೆ ಮತ್ತು ಸಾಗಾಣಿಕೆ ನಡೆಯುತ್ತಿದ್ದು, ಈ ಬಗ್ಗೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ವತಿಯಿಂದ ನಿರಂತರ ಗಸ್ತು ಪಹರೆ ನಡೆಸಿ ವಶಪಡಿಸಿಕೊಳ್ಳಲಾಗಿದ್ದು, ಮರಳಿನ ದಾಸ್ತಾನನ್ನು ವಿಲೇವಾರಿ ಮಾಡಲಾಗುತ್ತಿದೆ.

ಮೇಲ್ಕಂಡ ಗ್ರಾಮಗಳ ಜನರು ರಾತ್ರಿ ವೇಳೆ ಏಕಾಏಕಿ ಸುಮಾರು 150 ರಿಂದ 200 ಟ್ರಾಕ್ಟರ್‌ಗಳಲ್ಲಿ ನದಿ ಮರಳನ್ನು ಎತ್ತುವಳಿ ಮಾಡಿ ಸಾಗಾಣಿಕೆ ಮಾಡಲು ಯತ್ನಿಸುತ್ತಿರುವುದು ಕಂಡುಬಂದಿದ್ದು, ಈ ಕೃತ್ಯವು ಕಾನೂನುಬಾಹಿರವಾಗಿದ್ದು, ನಿಯಂತ್ರಣಗೊಳಿಸಲು ಕಷ್ಟಸಾಧ್ಯವಾಗುತ್ತಿದ್ದು ಕಾನೂನು ಸುವ್ಯವಸ್ಥೆಗೂ ಭಂಗವಾಗುತ್ತಿದೆ. ಆದ್ದರಿಂದ ಅಳವಂಡಿ ಹೋಬಳಿಯ ಕೇಸಲಾಪುರ, ಹಲವಾಗಲಿ, ನಿಲೋಗಿಪುರ, ಹಳೇನಿಲೋಗಿಪುರ ಮತ್ತು ತಿಗರಿ ಗ್ರಾಮಗಳ ಗ್ರಾಮಸ್ಥರು ಅನಧಿಕೃತ ಮರಳು ಎತ್ತುವಳಿ ಮತ್ತು ಸಾಗಾಣಿಕೆ ಚಟುವಟಿಕೆ ಯತ್ನಗಳನ್ನು ಈ ಕೂಡಲೇ ಕೈಬಿಡಬೇಕು. ತಪ್ಪಿದಲ್ಲಿ ಟ್ರಾಕ್ಟರ್ ವಾಹನಗಳ ಮಾಲೀಕರು ಮತ್ತು ಚಾಲಕರ ವಿರುದ್ಧ ಜಿಲ್ಲಾ ಮರಳು ಉಸ್ತುವಾರಿ ಸಮಿತಿ/ ತಾಲೂಕು ಮರಳು ಉಸ್ತುವಾರಿ ಸಮಿತಿ ಹಾಗೂ ಗ್ರಾಮ ಖನಿಜ ಉಸ್ತುವಾರಿ ಸಮಿತಿಗಳ ಸದಸ್ಯ ಇಲಾಖೆಗಳ ಸಕ್ಷಮ ಅಧಿಕಾರಿಗಳ ಸಹಯೋಗದಲ್ಲಿ ದಂಡವಿಧಿಸಿ/ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಕಾನೂನು ರೀತ್ಯ ಕ್ರಮ ಜರುಗಿಸಲಾಗುವುದು ಎಂದು ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಹಿರಿಯ ಭೂವಿಜ್ಞಾನಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕುಡಿಯುವ ನೀರು ಮತ್ತು ಬರ ನಿರ್ವಹಣೆ ಕ್ರಮಗಳ ಕುರಿತು ಪತ್ರಿಕಾಗೋಷ್ಠಿ

## ಜಿಲ್ಲೆಯಲ್ಲಿ ಬರ ನಿರ್ವಹಣೆಗೆ ಅಗತ್ಯ ಕ್ರಮ ವಹಿಸಲಾಗಿದೆ: ಡಿಸಿ ನಲಿನ್ ಅತುಲ್

**ಕೊಪ್ಪಳ :** ಜಿಲ್ಲೆಯ ಒಟ್ಟು 153 ಗ್ರಾಮ ಪಂಚಾಯತಿಗಳ ವ್ಯಾಪ್ತಿಯ 722 ಗ್ರಾಮಗಳ ಪೈಕಿ 430 ಗ್ರಾಮಗಳಿಗೆ ಡಿಬಿಓಟಿ, ಎಂವಿಎಸ್ ಯೋಜನೆ ಮುಖಾಂತರ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದ್ದು ಬರ ನಿರ್ವಹಣೆಗೆ ಅಗತ್ಯ ಕ್ರಮ ವಹಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾಧಿಕಾರಿ ನಲಿನ್ ಅತುಲ್ ಅವರು ತಿಳಿಸಿದರು.



ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಕುಡಿಯುವ ನೀರು ಮತ್ತು ಬರ ನಿರ್ವಹಣೆ ಕುರಿತಾಗಿ ಜಿಲ್ಲಾಡಳಿತ ಕೈಗೊಂಡ ಕ್ರಮಗಳ ಕುರಿತು ಮಾಹಿತಿ ನೀಡಲು ಮಂಗಳವಾರದಂದು ಕರೆಯಲಾಗಿದ್ದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಅವರು ಮಾತನಾಡಿದರು.

**ಬೋರ್‌ವೆಲ್‌ಗಳ ಮೂಲಕ ನೀರು ಸರಬರಾಜು:**

ಜಿಲ್ಲೆಯಲ್ಲಿ 2334 ಸರ್ಕಾರಿ ಮತ್ತು 6366 ಖಾಸಗಿ ಬೋರ್‌ವೆಲ್‌ಗಳಿದ್ದು, ಇದರಲ್ಲಿ 898 ಖಾಸಗಿ ಬೋರ್‌ವೆಲ್ ಗಳನ್ನು ಗುರುತಿಸಿದ್ದು, ಅದರಲ್ಲಿ 150 ಖಾಸಗಿ ಬೋರ್‌ವೆಲ್‌ಗಳ ಮಾಲೀಕರಿಂದ ಕರಾರು ಪತ್ರವನ್ನು ಮಾಡಿಸಿಕೊಂಡಿರುತ್ತೇವೆ. ಮುಂದಿನ 3 ತಿಂಗಳಲ್ಲಿ 151 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಬರಬಹುದು ಎಂದು ಅಂದಾಜಿಸಲಾಗಿದೆ. ಸದ್ಯಕ್ಕೆ ಜಿಲ್ಲೆಯಲ್ಲಿ 28 ಗ್ರಾಮ ಪಂಚಾಯತಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಿರುತ್ತದೆ. ಜಿಲ್ಲೆಯ ಕೊಪ್ಪಳ ಮತ್ತು ಕುಕನೂರು ತಾಲೂಕಿನಲ್ಲಿ 7 ಗ್ರಾಮಗಳಲ್ಲಿ ಕುಡಿಯುವ ಸಮಸ್ಯೆ ಉಂಟಾಗಿದ್ದು, ಅಲ್ಲಿ 09 ಟ್ಯಾಂಕರ್‌ನಿಂದ ಪ್ರತಿ ದಿನ ಸರಾಸರಿ 3–4 ಟ್ರಿಪ್ ಟ್ಯಾಂಕರ್ ಮೂಲಕ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ. ಮತ್ತು 33 ಗ್ರಾಮಗಳಲ್ಲಿ 38 ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆ ಆಧಾರದ ಮೇಲೆ ಪಡೆಯಲಾಗಿರುತ್ತದೆ.

**ಕುಡಿಯುವ ನೀರು ಸರಬರಾಜಿಗೆ ಅಗತ್ಯ ಅನುದಾನ ಮೀಸಲು:**

ಗ್ರಾಮೀಣ ಮಟ್ಟದಲ್ಲಿ ಅತಿಯಾಗಿ ಕುಡಿಯುವ ನೀರಿನ ಸಮಸ್ಯೆಯಾದರೆ ಟ್ಯಾಂಕರ್ ಮೂಲಕ ಕುಡಿಯುವ ನೀರು ಸರಬರಾಜು ಮಾಡಿಕೊಳ್ಳಲು ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಬಿಡುಗಡೆಯಾದ ಅನುದಾನದಲ್ಲಿ ರೂ.25 ಲಕ್ಷಗಳನ್ನು ಟ್ಯಾಂಕರ್ ಮೂಲಕ ಕುಡಿಯುವ ನೀರು ಸರಬರಾಜು ಮಾಡುವ ಸಲುವಾಗಿ ಮೀಸಲಿರಿಸಿದೆ. 7 ತಾಲ್ಲೂಕಿನ ತಹಶೀಲ್ದಾರರ ಪಿ.ಡಿ ಖಾತೆಯಲ್ಲಿ ಸಹ ತುರ್ತು ಕುಡಿಯುವ ನೀರಿನ ಸರಬರಾಜು ಸಲುವಾಗಿ ತಲಾ ರೂ.50 ಲಕ್ಷಗಳನ್ನು ಕಾಯ್ದಿರಿಸಲಾಗಿದೆ. ನಗರ ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದಿಲ್ಲ ಎಂದು ಸ್ಥಳೀಯ ಸಂಸ್ಥೆಯ ಮುಖ್ಯಾಧಿಕಾರಿಗಳು ತಿಳಿಸಿದ್ದಾರೆ. ಹೀಗಾಗಿ ಜಿಲ್ಲಾಡಳಿತದಿಂದ ಕುಡಿಯುವ ನೀರು ಸಲುವಾಗಿ ಎಲ್ಲಾ ರೀತಿಯಿಂದ ತಯಾರಿ ಮಾಡಿ ಇಟ್ಟುಕೊಳ್ಳಲಾಗಿದೆ. ಜಿಲ್ಲಾಧಿಕಾರಿಗಳ ಪಿ.ಡಿ ಖಾತೆಯಲ್ಲಿ ರೂ.19.55 ಕೋಟಿ ಅನುದಾನ ಲಭ್ಯವಿರುತ್ತದೆ. ಮತ್ತು ಪ್ರತಿ ಸ್ಥಳೀಯ ಸಂಸ್ಥೆಗಳಲ್ಲಿ 20 ರಿಂದ 30 ಲಕ್ಷಗಳನ್ನು ಕುಡಿಯುವ ನೀರಿಗಾಗಿ ಅನುದಾನವನ್ನು ಮೀಸಲಿರಿಸಿದೆ.

**ಜಿಲ್ಲೆಯಲ್ಲಿ ಅಗತ್ಯ ಪ್ರಮಾಣದ ಮೇವು ದಾಸ್ತಾನು ಲಭ್ಯ:**

ಜಿಲ್ಲೆಯಲ್ಲಿ 4,80,598.5 ಮೆಟ್ರಿಕ್ ಟನ್ ಮೇವು ಲಭ್ಯವಿದ್ದು ಇನ್ನೂ 32 ವಾರಕ್ಕೆ ಸಾಕಾಗುವಷ್ಟು ಮೇವು ಲಭ್ಯವಿರುತ್ತದೆ. ಜಿಲ್ಲೆಯಲ್ಲಿ ಮುಂದಿನ ದಿನಗಳಲ್ಲಿ ಮೇವಿನ ಸಮಸ್ಯೆ ಉಂಟಾದರೆ ಮೇವಿನ ಬ್ಯಾಂಕ್ ತೆರೆಯಲು ಕ್ರಮ ಕೈಗೊಳ್ಳಲಾಗಿದೆ ಮತ್ತು ಜಿಲ್ಲೆಯ ಪಶು ಸಂಗೋಪನಾ ಇಲಾಖೆಗೆ ರೈತರಿಗೆ ಮೇವಿನ ಕಿಟ್ ನೀಡಲು ಸರ್ಕಾರದಿಂದ 26659 ಮಿನಿ ಕಿಟ್‌ಗಳನ್ನು ಸರಬರಾಜು ಆಗಿದ್ದು, ಅದರಲ್ಲಿ 17609 ಕಿಟ್‌ಗಳನ್ನು ಅವಶ್ಯವಿರುವ ರೈತರಿಗೆ ನೀಡಲಾಗಿದೆ. ಜಿಲ್ಲೆಯಲ್ಲಿ ಸದ್ಯಕ್ಕೆ ಮೇವಿನ ಸಮಸ್ಯೆ ಇರುವದಿಲ್ಲ.

**ರೈತರ ಹಾಗೂ ಸಾರ್ವಜನಿಕರ ಸಮಸ್ಯೆಗೆ ಸ್ಪಂದಿಸಲು ಸಹಾಯವಾಣಿ ಆರಂಭ:**

ಜಿಲ್ಲೆಯಲ್ಲಿ ರೈತರಿಗೆ ಇನ್‌ಪುಟ್ ಸಬ್ಸಿಡಿ ಡಿ.ಬಿ.ಟಿ ಮೂಲಕ ಜಮಾ ಆದ ಮಾಹಿತಿಯನ್ನು ಸಂಬಂಧಪಟ್ಟ ಗ್ರಾಮ ಪಂಚಾಯತ್ ಕಛೇರಿಯಲ್ಲಿ ಪ್ರಚುರ ಪಡಿಸಲಾಗಿದೆ. ಬರಪೀಡಿತ ಪ್ರದೇಶವೆಂದು ಘೋಷಣೆ ಮಾಡಿದ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ಕುಡಿಯುವ ನೀರಿನ ಮತ್ತು ಮೇವಿನ ಸಮಸ್ಯೆ ಕುರಿತು ಹಾಗೂ ರೈತರಿಗೆ ನೀಡುವ ಇನ್‌ಪುಟ್ ಸಬ್ಸಿಡಿ ಹಣ ಖಾತೆಗೆ ಜಮಾ ಆಗದೇ ಇರುವ ಬಗ್ಗೆ ದೂರುಗಳನ್ನು ಸಲ್ಲಿಸಲು ಸಾರ್ವಜನಿಕರಿಗೆ ಅನುಕೂಲವಾಗುವಂತೆ ತಾಲೂಕು ಮತ್ತು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಸಹಾಯವಾಣಿಯನ್ನು ತೆರೆಯಲಾಗಿರುತ್ತದೆ. ಇದುವರೆಗೂ 314 ದೂರುಗಳು ಸ್ವೀಕೃತವಾಗಿದ್ದು, ಸ್ವೀಕೃತವಾದ ದೂರುಗಳಲ್ಲಿ 182 ಪೈಪ್‌ಲೈನ್ ದುರಸ್ಥಿ, 91 ಕುಡಿಯುವ ನೀರು ಒದಗಿಸಲು ಮತ್ತು 41 ಮೋಟರ್ ದುರಸ್ಥಿ ಮಾಡಿಸುವ ಕುರಿತು ದೂರುಗಳು ದಾಖಲಾಗಿವೆ. ಅದರಲ್ಲಿ 310 ದೂರುಗಳನ್ನು ಬಗೆಹರಿಸಲಾಗಿದೆ ಇನ್ನೂ 4 ದೂರುಗಳು ಬಗೆಹರಿಸಲು ಬಾಕಿ ಇದೆ.

**ಜಿಲ್ಲಾಧಿಕಾರಿಗಳ ಕಚೇರಿ ಹಾಗೂ ತಾಲ್ಲೂಕು ಕಚೇರಿಗಳಲ್ಲಿನ ಸಹಾಯವಾಣಿ ಸಂಖ್ಯೆಗಳು:**

ಜಿಲ್ಲಾಧಿಕಾರಿಗಳ ಕಚೇರಿ ಮೊ.ಸಂ. 7676732001, ತಾಲ್ಲೂಕು ಕಚೇರಿ, ಕೊಪ್ಪಳ ಮೊಸಂ.9380252346, ಯಲಬುರ್ಗಾ ಮೊ.ಸಂ. 9448833207, ಕುಷ್ಟಗಿ ಮೊ.ಸಂ. 9845791349, ಕನಕಗಿರಿ ಮೊ.ಸಂ.9900433012, ಕುಕನೂರು ಮೊ.ಸಂ.8050303495, ಗಂಗಾವತಿ ಮೊ.ಸಂ.9740793877, ಕಾರಟಗಿ ಮೊ.ಸಂ.9743600343.

**ಸ್ಥಳೀಯ ಸಂಸ್ಥೆಗಳ ಸಹಾಯವಾಣಿ ಸಂಖ್ಯೆಗಳು:**

ಕೊಪ್ಪಳ: 08539–230192, ಭಾಗ್ಯನಗರ: 08539–230243, ಕುಕನೂರು: 8197396725, 8431363187, ಯಲಬುರ್ಗಾ: 9880524225, 9743277571, ಕುಷ್ಟಗಿ: 08536–267041, ತಾವರಗೇರಾ: 990057212, 8971014351, ಕಾರಟಗಿ: 08533–274232, ಕನಕಗಿರಿ: 8951133577, ಗಂಗಾವತಿ: 08533–230240, 8050428081.

ಕೊಪ್ಪಳ ಜಿಲ್ಲೆಯ 7 ತಾಲೂಕುಗಳನ್ನು ಸರ್ಕಾರ ಬರಪೀಡಿತ ಪ್ರದೇಶವೆಂದು ಘೋಷಣೆ ಮಾಡಿದ ಹಿನ್ನೆಲೆಯಲ್ಲಿ ಯಾವುದೇ ರೀತಿಯ ಕುಡಿಯುವ ನೀರಿನ ಮತ್ತು ಮೇವಿನ ಸಮಸ್ಯೆ ಉದ್ಭವಿಸಿದರೆ ತಕ್ಷಣ ಸ್ಪಂದಿಸಲು ತಹಶೀಲ್ದಾರ ಮತ್ತು ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್ ಇವರಿಗೆ ನಿರ್ದೇಶನ ನೀಡಲಾಗಿದೆ. ಗ್ರಾಮ ಮಟ್ಟದ ಟಾಸ್ಕ್‌ಫೋರ್ಸ್‌ನಲ್ಲಿ ಸಮಿತಿಯನ್ನು ರಚನೆ ಮಾಡಿಕೊಳ್ಳಲಾಗಿದೆ ಹಾಗೂ ಜಿಲ್ಲೆಯಲ್ಲಿ ಬರಗಾಲ ನಿರ್ವಹಣೆಗಾಗಿ ಅನುದಾನದ ಕೊರತೆ ಇರುವುದಿಲ್ಲ ಎಂದರು.

ಜಿಲ್ಲೆಯಲ್ಲಿ ಪ್ರತಿ ಮಂಗಳವಾರ ಮತ್ತು ಬುಧವಾರ ಗ್ರಾಮ ಮಟ್ಟದ ಕಾರ್ಯಪಡೆ ಮತ್ತು ಪ್ರತಿ ಗುರುವಾರ ತಾಲ್ಲೂಕಾ ಮಟ್ಟದ ಕಾರ್ಯಪಡೆ ಹಾಗೂ ಜಿಲ್ಲಾ ಮಟ್ಟದಲ್ಲಿ ಪ್ರತಿ ಶುಕ್ರವಾರ (ಜೂಮ್ ವಿ.ಸಿ ಮೂಲಕ) ಎಲ್ಲಾ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಆಡಳಿತಾಧಿಕಾರಿಗಳು, ಪಶು ಸಖಿ, ಕೃಷಿ ಸಖಿ ಮತ್ತು ತಾಲೂಕು ಮಟ್ಟದ ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಾಪ್ತಾಹಿಕ ಸಭೆಗಳನ್ನು ನಡೆಸಲಾಗುತ್ತಿದೆ. ಜಿಲ್ಲಾಡಳಿತದಿಂದ ಜಿಲ್ಲೆಯ ಯಾವುದೇ ಗ್ರಾಮಗಳಲ್ಲಿ ಕುಡಿಯುವ ನೀರು, ಜಾನುವಾರುಗಳಿಗೆ ಮೇವಿನ ಸಮಸ್ಯೆ ಆಗದಂತೆ ಎಲ್ಲ ಅಗತ್ಯ ಕ್ರಮ ಕೈಗೊಳ್ಳಲಾಗಿದ್ದು, ಅಚ್ಚುಕಟ್ಟು ಬರ ನಿರ್ವಹಣೆಗೆ ಕ್ರಮ ವಹಿಸಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೆಯ ಉಪಸ್ಥಿತರಿದ್ದರು.

# ಅಕಾಲಿಕ ಆಣೆಕಲ್ಲು ಮಳೆ ಹಾಗೂ ಭೀಕರ ಗಾಳಿಯಿಂದ ನಷ್ಟಗೊಂಡ ರೈತರಿಗೆ ಪರಿಹಾರ ನೀಡುವಂತೆ ರೈತ ಸಂಘದಿಂದ ಜಿಲ್ಲಾಧಿಕಾರಿಗಳಿಗೆ ಮನವಿ

**ವಿಜಯಪುರ :** ಶನಿವಾರ ಸಂಜೆ ಸುರಿದ ಅಕಾಲಿಕ ಆಣೆಕಲ್ಲು ಮಳೆ ಹಾಗೂ ಭೀಕರ ಗಾಳಿಯಿಂದ ಜಿಲ್ಲೆಯ ಹಲವೆಡೆ ಲಿಂಬೆ, ದ್ರಾಕ್ಷಿ, ದಾಳಿಂಬೆ, ಮಾವು, ಚಿಕ್ಕು, ತೆಂಗು ಸೇರಿದಂತೆ ವಿವಿಧ ರೀತಿಯ ತೋಟಗಾರಿಕೆ ಬೆಳೆಗಳು ನೆಲಕ್ಕೆ ಉರುಳಿವೆ, ಜೊತೆಗೆ ಸಿಡಿಲು ಬಡಿದು ಎತ್ತು, ಕುರಿ, ಕೋಳಿಗಳು ಸಾವನ್ನಪ್ಪಿರುವ ಘಟನೆಗಳು ನಡೆದು ರೈತರಿಗೆ ಸಾಕಷ್ಟು ನಷ್ಟವುಂಟಾಗಿದೆ ನಷ್ಟಗೊಂಡ ರೈತರಿಗೆ ಪರಿಹಾರ ನೀಡುಬೇಕೆಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ಪರ್ ಜಿಲ್ಲಾಧಿಕಾರಿಗಳಾದ ಮಹಾದೇವ ಮುರಗಿ ಅವರಿಗೆ ಮನವಿ ಸಲ್ಲಿಸಿ ಪರಿಹಾರಕ್ಕಾಗಿ ಆಗ್ರಹಿಸಿದರು.

ಜಿಲ್ಲಾಧ್ಯಕ್ಷರಾದ ಸಂಗಮೇಶ ಸಗರ ಅವರು ಮನವಿ ಸಲ್ಲಿಸಿ ಮಾತನಾಡುತ್ತಾ ಶನಿವಾರ ರಾತ್ರಿ ಜಿಲ್ಲೆಯ ಹಲವು ಕಡೆ ಏಕಾಏಕಿ ಅಕಾಲಿಕ ಆಣೆಕಲ್ಲು ಮಳೆ ಹಾಗೂ ಭೀಕರ ಗಾಳಿಯಿಂದಾಗಿ ರೈತರಿಗೆ ಅಪಾರ ಪ್ರಮಾಣದ ನಷ್ಟ ಉಂಟಾಗಿರುವುದು ಕಂಡು ಬಂದಿದೆ, ಸಮೀಪದ ಜಂಬಗಿ(ಆಹೇರಿ) ಮಾದಾಳ ವಸ್ತಿ ಎಂಭ ಗ್ರಾಮದ ಸುಮಾರು 40–50 ರೈತರ ಜಮೀನಿನಲ್ಲಿನ ಲಿಂಬೆ ಗಿಡಗಳು ಗಾಳಿಗೆ ನೆಲಕ್ಕೆ ಉರುಳಿ ಎಲ್ಲಾ ಲಿಂಬೆ, ಮಿಡಿಲಿಂಬೆಕಾಯಿ, ಹಾಗೂ ಹೂಗಳು ನೆಲಕ್ಕೆ ಬಿದ್ದು ಬೆಲೆ ಬಾಳುವ ಲಿಂಬೆ ಮಾರುಕಟ್ಟೆಗೆ ಕಳುಹಿಸಿ ಕೈತುಂಬ ಹಣ ಬರುವಾಗ ಈ ರೀತಿಯಾಗಿ ನಷ್ಟಗೊಂಡಿರುವ ಘಟನೆ ನಡೆದಿವೆ. ಬರಗಾಲದಿಂದ ನೀರು ಸಿಗದಿರುವ ವೇಳೆ ಇರುವ ಅಲ್ಪಸ್ವಲ್ಪ ನೀರಿನಲ್ಲಿ ಹಾಗೂ ಟ್ಯಾಂಕರ್ ನೀರು ಹಾಕಿಕೊಂಡು ಕೂಸಿನಂತೆ ಬೆಳೆಸಿದ ಪ್ರತಿ ಡಾಗ ಲಿಂಬೆಗೆ 7000 ರೂ ನಡೆದಿರುವಂತಹ ವೇಳೆ ಈ ನಷ್ಟ ನುಂಗಲಾರದ ತುತ್ತಾಗಿದೆ

ಇದೇರೀತಿ ದಾಳಿಂಬೆ, ಚಿಕ್ಕು, ಮಾವು, ತೆ–ಂಗು, ಸೇರಿದಂತೆ ಇನ್ನಿತರ ಹಣ್ಣಿನ ಗಿಡಗಳು ನೆಲಕ್ಕೆ ಬಿದ್ದು ನಷ್ಟ ಉಂಟಾಗಿವಿರುವ ಘಟನೆ ನಡೆದಿದೆ, ಒಣ ಮೇವಿನ ಭಣವಿ ಹಾಗೂ ಹಲವಾರು ಪತ್ರೆ ಮನೆಗಳು, ಮನೆಗಳು ಗಾಳಿಗೆ ಬಿದ್ದು ನಷ್ಟ ಉಂಟಾಗಿರುವ ಘಟನೆ ನಡೆದಿದೆ, ಬೋಮ್ಮನಹಳ್ಳಿ ಗ್ರಾಮದಲ್ಲಿ ಮುರುಗೆಪ್ಪ ಚೌಗುಲಾ ಅವರ 1000 ಬಾಳೆ ಗಿಡ ನೆಲಕ್ಕೆ ಉರುಳಿವೆ, ನಾಗಠಾಣ ಗ್ರಾಮದ ಅರವಿಂದ ಗುಣಕಿ, ರಾಜಕುಮಾರ ಗುಣಕಿ, ಗಂಗಾಧರ ಗುಣಕಿ, ಆಕಾಶ ಗುಣಕಿ ಅವರ 8 ಟ್ರ್ಯಾಕ್ಟರನಷ್ಟು ಕಣಿಕಿ, 3 ಚೀಲ ಗೋಧಿ, ಪೈಪ ಸೇರಿದಂತೆ ಇತರ ನಷ್ಟ ಉಂಟಾಗಿದೆ, ಗುಣಕಿ ಗ್ರಾಮದಲ್ಲಿ ಸಿಡಿಲಿಗೆ 2 ಎತ್ತು ಮೃತಪಟ್ಟು, 1 ಕುರಿ, ಕೋಳಿ, ಸಹ ಮೃತಪಟ್ಟಿರುವ ಘಟನೆ ನಡೆದಿದೆ ಎನ್ನಲಾಗಿದೆ



ಇದೇರೀತಿಯಾಗಿ ಜಿಲ್ಲೆಯ ಹಲವೆಡೆ ಆಣೆಕಲ್ಲು ಮಳೆ ಹಾಗೂ ಗಾಳಿಯಿಂದಾಗಿ ಸಾಕಷ್ಟು ಪ್ರಮಾಣದ ನಷ್ಟ ಉಂಟಾಗಿರುವುದು ಕಂಡು ಬಂದಿದೆ, ಆದ್ದರಿಂದ ಸಂಬಂಧಿಸಿದ ತಹಶಿಲ್ದಾರರು, ತೋಟಗಾರಿಕೆ, ಕಂದಾಯ ಇಲಾಖೆಯ ಅಧಿಕಾರಿಗಳಿಂದ ವಿಸ್ತೃತವಾದ ಸಮೀಕ್ಷಾ ವರದಿಯನ್ನು ತರಿಸಿಕೊಂಡು ಸೂಕ್ತ ಪರಿಹಾರ ನೀಡಬೇಕೆಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ನಷ್ಟಗೊಂಡ ಪ್ರತಿಯೊಬ್ಬ ರೈತರಿಗೆ ಎಕರೆಗೆ ಸುಮಾರು 5 ಲಕ್ಷ ಪರಿಹಾರ ಕೊಡಬೇಕೆಂದು ಈ ಮೂಲಕ ಆಗ್ರಹಿಸುತ್ತೇವೆ

ಈ ಮೇಲಿನ ವಿಷಯವನ್ನು ಗಂಭಿರವೆಂದು ಪರಿಗಣಿಸಿ ಜಿಲ್ಲಾಧಿಕಾರಿಗಳು ಜಿಲ್ಲೆಯಾಧ್ಯಂತ ಸಮೀಕ್ಷೆ ಮಾಡಿ ತುರ್ತು ವಿಪತ್ತು ಪರಿಹಾರ ನಿಧಿಯಡಿ ಜಿಲ್ಲಾಧಿಕಾರಿಗಳು ವಿಶೇಷ ಕಾಳಜಿ ವಹಿಸಿ ಪರಿಹಾರ ನೀಡಬೇಕೆಂದು ಒತ್ತಾಯಿಸುತ್ತೇವೆ. ಒಂದು ವೇಳೆ ವಿಳಂಭ ನೀತಿ ಅನುಸಿರಿಸಿದರೆ ಜಿಲ್ಲೆಯ ಎಲ್ಲಾ ರೈತ–ರಿಂದ ಜಿಲ್ಲಾಧಿಕಾರಿಗಳ ಕಛೇರಿಗೆ ಮುತ್ತಿಗೆ ಹಾಕಿ ಬೃತಿಭಟನೆ ಮಾಡಲಾಗುವುದು ಎಂದು ಎಚ್ಚರಿಸಿದರು.

ಈ ವೇಳೆ ತಾಲೂಕಾ ಅಧ್ಯಕ್ಷರಾದ ಅರುಣಗೌಡ ತೇರದಾಳ, ತಾಲೂಕಾ ಉಪಾಧ್ಯಕ್ಷರಾದ ಮಹಾದೇವಪ್ಪ ತೇಲಿ, ಜಿಲ್ಲಾ ಸಂಚಾಲಕರಾದ ರಾಮನಗೌಡ ಪಾಟೀಲ(ಬ್ಯಾಲ್ಯಾಳ), ತಾಲೂಕಾ ಉಪಾಧ್ಯಕ್ಷರಾದ ಪ್ರಕಾಶ ತೇಲಿ, ಜಿಲ್ಲಾ ಸಂಚಾಲಕರಾದ ಮಹಾಂತೇಶ ಮಮದಾಪುರ, ಸದಸ್ಯರಾದ ಮಲ್ಲಿಕಾರ್ಜುನ ಮಹಾಂತಮಠ, ತಾಲೂಕ ಯುವ ಘಟಕದ ಅಧ್ಯಕ್ಷರಾದ ಪ್ರಭು ಕಾರಜೋಳ, ನಗರ ಘಟಕದ ಅಧ್ಯಕ್ಷರಾದ ಸಂಗಪ್ಪ ಚಲವಾದಿ, ಹಾಜಿಲಾಲ ಖರ್ಜಗಿ, ಅಫಜಲಪುರ ಟಕ್ಕೆ, ಸಂತೋಷ ಮುಡಗಿ, ಗಣೇಶ ತಗಡೆ, ಪ್ರಕಾಶ ಹತ್ತಳ್ಳಿ, ಸಾಹೇಬಣ್ಣ ಕೆರೂರ, ಸಿದ್ದಪ್ಪ ಕೆರೂರ, ಸತೀಶ ಕೆರೂರ, ಓಗೆಪ್ಪ ಬಿರಾದಾರ, ಸೋಮನಾಥ ನಂದಿಕೋಲ, ಶ್ರೀಶೈಲ ಪೂಜಾರಿ, ಅರವಿಂದ ಗುಣಕಿ, ಸಂಗಪ್ಪ ಕೋಣಸಿರಸಗಿ, ರಾಜಕುಮಾರ ಗುಣಕಿ, ಸೇರಿದಂತೆ ಜಂಬಗಿ, ಆಹೇರಿ, ನಾಗಠಾಣ, ದ್ಯಾಬ್ಯಾರಿ ಗ್ರಾಮದ ಉಪಸ್ಥಿತರಿದ್ದರು.

# ಬಂಜೆತನ ಸಮಸ್ಯೆಯಿಂದ ಬಳಲುವ ರೋಗಿಗಳಿಗೆ ಬೆಬಿ ಸೈನ್ಸ್ ಐವಿಎಫ್ ಕ್ಲಿನಿಕ್ಸ್ ಒಂದು ದಾರಿದೀಪ: ಡಾ. ಮಾಸ್ತಿಹೊಳಿ

**ವಿಜಯಪುರ :** ವಿಜಯಪುರದಲ್ಲಿ ಬೇಬಿ ಸೈನ್ಸ್ ಐವಿಎಫ್ ಕ್ಲಿನಿಕ್ಸ್ ಪ್ರಾರಂಭವಾಗಿದೆ. ಇದ–ರಿಂದ ಗ್ರಾಮಾಂತರ ಜನರಿಗೂ ಬಂಜೆತನ ಸಮಸ್ಯೆ ಪರಿಹರಿಸಿಕೊಳ್ಳಲು ಸೂಕ್ತವಾಗಲಿದೆ ಎಂದುಜಿಲ್ಲಾಶಸ್ತ್ರಚಿಕಿತ್ಸಕರಾದಡಾ.ಶಿವಾನಂದ ಮಾಸ್ತಿಹೊಳಿಇಂದಿಲ್ಲಿಹೇಳಿದರು.

ಬೇಬಿ ಸೈನ್ಸ್ ಐವಿಎಫ್ ಕ್ಲಿನಿಕ್ಸ್‌ವು ನಗರದ ಲಿ. ಗ್ರೈಂಡ್‌ಹೋಟೇಲ್‌ದಲ್ಲಿಹೆರಿಗೆಮತ್ತುಪ್ರಸೂತಿ ರೋಗ ತಜ್ಞರಿಗಾಗಿ ಏರ್ಪಡಿಸಿದ 'ಬಂಜೆತನ ನಿವಾರಣಾ ಕಾರ್ಯಾಗಾರ' ವನ್ನು ಉದ್ಘಾಟಿಸಿ ಅವರು ಮಾತನಾಡುತ್ತ, ಇದು ಕೇವಲ ಮೆಟ್ರೋ–ಪಾಲಿಟಿನ್ ನಗರಗಳಲ್ಲಿ ಸಿಗುವ ಬಂಜೆತನಎಂಬಸಮಸ್ಯೆಗೆಪರಿಹಾರವನ್ನುಈಗ ಜಿಲ್ಲಾ ಕೇಂದ್ರಗಳಲ್ಲಿ ಸಿಗುವಂತೆ ಅನೇಕ ಕ್ಲೀನಿಕ್ಸ್ ಹುಟ್ಟಿಕೊಳ್ಳುತ್ತಿವೆಅದರಲ್ಲಿಬೇಬಿಸೈನ್ಸ್‌ಐವಿಎಫ್ ಕ್ಲಿನಿಕ್ಸ್‌ವು ಪ್ರಾರಂಭವಾಗಿದ್ದು, ಬಂಜೆತನ ಸಮಸ್ಯೆಯಿಂದ ಬಳಲುವ ಗ್ರಾಮಾಂತರ ರೋಗಿಗಳು ತಮ್ಮ ಸಮೀಪದ ಕೇಂದ್ರಗಳಲ್ಲಿ ಪಡೆದುಕೊಳ್ಳಲು ಸಹಕಾರಿಯಾಗುತ್ತದೆ ಎಂದವರು ಹೇಳಿದರು. ಈ ಸೇವೇಯಲ್ಲಿ 16 ವರ್ಷ ಸಕ್ರೀಯವಾಗಿ ಸೇವೆ ಸಲ್ಲಿಸಿದ ಬೇಬಿ ಸೈನ್ಸ್ ಐವಿಎಫ್ ಕ್ಲಿನಿಕ್ಸ್‌ದ ವ್ಯವಸ್ಥಾಪಕ ನಿರ್ದೇಶಕರಾದ ಡಾ. ಸಿ.ಎಸ್.ಮಂಜುನಾಥ ಅವರು ಪ್ರಾಸ್ತಾವಿಕವಾಗಿ ಮಾತನಾಡಿ ನಮ್ಮ



ಕ್ಲಿನಿಕ್ ಬೆಂಗಳೂರು, ದೆಹಲಿ, ಗುರುಗಾಂ, ಮುಂಬೈ, ಬಿಜಾಪುರ, ಮಂಗಳೂರು ಕೊಲಾರ ಹಾಗೂ ಚೆನ್ನೈ ಗಳಲ್ಲಿ ಪ್ರಾರಂಭವಾಗಿವೆ. ದೇಶದಾದ್ಯಂತ ಇನ್ನು 36 ಕೇಂದ್ರಗಳನ್ನು ತೆರೆಯಲು ಇಚ್ಚಿಸಿದ್ದೇವೆ, ಎಲ್ಲಾ ಕೇಂದ್ರಗಳಲ್ಲಿ ಲ್ಯಾಬ್,ಅಲ್ಟ್ರಾಸೋನೊಗ್ರಫಿ(ಸ್ಕ್ಯಾನಿಂಗ್),ಇನ್‌ಟ್ರಾ–ಯುಟ್ರನ್ ಇನ್ಸಮಿನೇಷನ್ (ಐಯುಐ), ಲೆಪ್ರೊಸ್ಕೋಪಿ, ಹಿಸ್ಟೆರೋಸ್ಕೋಪಿ, ಟೆಸ್ಟ್ ಟ್ಯೂಬ್ ಬೇಬಿ(ಪ್ರನಾಳ ಶಿಶು) ಸೇರಿದಂತೆ ಅನೇಕ ಸೌಲಭ್ಯಗಳು ಸಿಗುವಂತೆ ವ್ಯವಸ್ಥೆ ಕಲ್ಲಿಸಿಕೊಡಲಾಗಿದೆ ಬಂಜೆತನ ಸಮಸ್ಯೆಯಿಂದ ಬಳಲುವ ರೋಗಿಗಳು ಜಿಲ್ಲಾ ವೈದ್ಯರ ಬಳಿ ಬಂದಾಗ ಈ ಕೇಂದ್ರಗಳ ಮಾಹಿತಿ ನೀಡಲು ಕರೆ ನೀಡಿದರು. ಈ ಕಾರ್ಯಾಗಾರದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಬಸವರಾಜಹುಬ್ಬಳ್ಳಿ,ಡಾ.ಕಾವ್ಯಾಶರ್ಮಾ,ಡಾ. ಶಿವಕುಮಾರಪೂಜಾರಿ,ರಾಜನ್,ಪ್ರಕಾಶಗೌಡ ಹಾಗೂ ಆರ್.ಸಿ.ಜೋಶಿ ಸೇರಿದಂತೆ ಅನೇಕ ವೈದ್ಯರುಗಳು ಉಪಸ್ಥಿತರಿದ್ದರು. ವಿಜಯಪುರ ಬೇಬಿ ಸೈನ್ಸ್ ಐವಿಎಫ್ ಕ್ಲಿನಿಕ್ಸ್ ಸಂಸ್ಥೆಯ ಡಾ. ಶಿವಕುಮಾರ ಪೂಜಾರಿ ಸರ್ವರನ್ನು ಸ್ವಾಗತಿಸಿದರು. ಈ ಕಾರ್ಯಾಗಾರದಲ್ಲಿ ಬೆಂಗಳೂರಿನ ಬೇಬಿ ಸೈನ್ಸ್ ಐವಿಎಫ್ ಕ್ಲಿನಿಕ್ಸ್‌ದ ಡಾ. ಕಾವ್ಯಾ ಶರ್ಮಾ ಸೇರಿದಂತೆ ಅನೇಕರು 'ಬಂಜೆತನ ನಿವಾರಣಾ ಸಮಸ್ಯೆಯ ಚಿಕಿತ್ಸೆಯ ಕುರಿತು ಮಾತನಾಡಿದರು. ವಿಜಯಪುರ ಜಿಲ್ಲೆಯ ಹೆರಿಗೆ ಮತ್ತು ಪ್ರಸೂತಿ ರೋಗ ತಜ್ಞರುಗಳಾದ ನಳಿನಿ ಬಾಗಲಕೋಟಕರ, ಪಿ.ಬಿ.ಜಾಜು, ಸುಚೇತಾ ಆಕಾಶ, ಎಫ್. ಎನ್.ಮಾಳಗಿ, ಶಕುಂತಲಾ ಹೋಳಿ, ಶೃತಿ ಉಟಗಿ, ವೀಣಾ ದಿವಟೇರ, ಉಷಾ ಬೆಳಗಲಿ, ಜ್ಯೋತಿ ದೇವರೆಡ್ಡಿ ಹಾಗೂ ಸುನಿತಾ ಪಾಟೀಲ ಅವರುಗಳು ಈ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

# ವಿಜಯಪುರ: ಏ.30ರೊಳಗೆ ತೆರಿಗೆ ಪಾವತಿಸಿ ರಿಯಾಯತಿ ಪಡೆಯಲು ಮನಪಾ ಕೋರಿಕೆ

**ವಿಜಯಪುರ :** ಪಸಕ್ತ ಸನ್ 2024–25 ನೇ ಸಾಲಿನ ಆಸ್ತಿ ತೆರಿಗೆಯನ್ನು ಏಪ್ರಿಲ್ 30 ರ ಒಳಗಾಗಿ ಪಾವತಿಸುವ ಕರದಾತರಿಗೆ ಶೇ 5% ರಿಯಾಯಿತಿಯನ್ನು ನೀಡಲಾಗುವುದು ಆದ್ದರಿಂದ ತೆರಿಗೆ ಪಾವತಿಸಿ ಇದರ ಲಾಭ ಪಡೆಯಬಹುದು. ಜೂನ್ ಒಳಗಾಗಿ ಪಾವತಿಸಿದಿದ್ದರೆ ಜೂಲೈ ತಿಂಗಳಿನಿಂದ ಪ್ರತಿ ತಿಂಗಳಿಗೆ ಶೇ 2% ದಂಡದೊಂದಿಗೆ ಪಾವತಿಸಬೇಕಾಗುತ್ತದೆ ಎಂದು ವಿಜಯಪುರ ಮಹಾನಗರ ಪಾಲಿಕೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವ ಮೊತ್ತವನ್ನು ಸಕಾಲದಲ್ಲಿ ಪಾವತಿಸಲು ವಿಫಲರಾದ ಆಸ್ತಿ ಮಾಲೀಕರುಗಳ ವಿರುದ್ಧ ಕೆ.ಎಮ್.ಸಿ. ಕಾಯ್ದೆ 1976 ರ ಅಧಿನಿಯಮಗಳನ್ವಯ ಬಾಕಿ ಇರುವ ಮೊತ್ತಗಳನ್ನು ವಸೂಲಿ ಮಾಡಲು, ಆಸ್ತಿ ಕರ ಬಾಕಿ ಉಳಿಸಿಕೊಂಡವರ ವಿರುದ್ಧ ನ್ಯಾಯಾಲಯದಲ್ಲಿ ದಾವೆ ದಾಖಲಿಸಲು, ಮತ್ತು ಆಸ್ತಿ ತೆರಿಗೆ ಬಾಕಿ ಇರುವ ಮೊತ್ತವನ್ನು ಜಪ್ತಿ ಮೂಲಕ ವಸೂಲಿ ಮಾಡಲು ಮಹಾನಗರ ಪಾಲಿಕೆ ಅಧಿಕಾರ ಹೊಂದಿರುತ್ತದೆ. ಕಾರಣ ಆಸ್ತಿ ಕರದಾತರು ಅವರ ವೈಯಕ್ತಿಕ ಆರ್ಥಿಕ ನಷ್ಟ, ಯಾವುದೇ ಅಹಿತಕರ ಸನ್ನಿವೇಶಗಳಿಗೆ ಅವಕಾಶ ನೀಡದೇ ಸಕಾಲದಲ್ಲಿ ಆಸ್ತಿ ತೆರಿಗೆ ಪಾವತಿಸಲು ಕೋರಿದೆ.

ಉಪನೋಂದಣಾಧಿಕಾರಿಗಳ ಮಾರುಕಟ್ಟೆ ಮಾರ್ಗಸೂಚಿ ಬೆಲೆಗಳು ಪರಿಷ್ಕೃತಗೊಂಡಿದ್ದು ಅವುಗಳಂತೆ ವಿಜಯಪುರ ಮಹಾನಗರಪಾಲಿಕೆಯ ಆಸ್ತಿ ತೆರಿಗೆಯನ್ನು ಸನ್ 2024–25 ನೇ ಸಾಲಿಗೆ ಅನ್ವಯವಾಗುವಂತೆ ಆಸ್ತಿ ತೆರಿಗೆಯಲ್ಲಿ ಹೆಚ್ಚಳವಾಗುವುದು ಕಾರಣ ಇದಕ್ಕೆ ಸಾರ್ವಜನಿಕರು ಸಹಕರಿಸಬೇಕಾಗಿ ಕೋರಿದೆ.

ಆಸ್ತಿ ತೆರಿಗೆಯನ್ನು ಪಾವತಿಸಲು ಕರದಾತರಿಗೆ ಮಹಾನಗರಪಾಲಿಕೆ ವಲಯ ಕಛೇರಿಗಳಾದ ಗಾಂಧಿಚೌಕ, ಬಡಿಕಮಾನ, ಜಲನಗರ, ಕಛೇರಿಗಳಲ್ಲಿರುವ ಕರ್ನಾಟಕ ಒನ್ ಕೇಂದ್ರಗಳಲ್ಲಿ ಪಾವತಿಸಬಹುದಾಗಿದ್ದು ಇವುಗಳಲ್ಲದೇ ಈ ಕೆಳಕಾಣಿಸಿದ ನಗರವ ವಿವಿಧ ಪ್ರದೇಶಗಳಲ್ಲಿರುವ ಕರ್ನಾಟಕ ಒನ್ ಫ್ರಾಂಚೈಸಿ ಕೇಂದ್ರಗಳಲ್ಲಿಯೂ ಆಸ್ತಿ ತೆರಿಗೆ ಪಾವತಿಸಲು ಅವಕಾಶವಿರುತ್ತದೆ.

ಮಹಾನಗರಪಾಲಿಕೆ ವ್ಯಾಪ್ತಿಗೆ ಬರುವ ತೆರಿಗೆದಾರರು ಈ ಕೆಳಕಂಡ ಕರ್ನಾಟಕ ಒನ್ ಪ್ರಾಂಚೈಸಿ ಕೇಂದ್ರಗಳಲ್ಲೂ ಸಹ ತೆರಿಗೆ ಪಾವತಿಸಬಹುದಾಗಿದೆ.

ಕರ್ನಾಟಕ ಒನ್, ಶಾಹುನಗರ ಗಚ್ಚಿನಕಟ್ಟಿ ಬಿಲ್ಡಿಂಗ್, ಕರ್ನಾಟಕ ಒನ್, ಬಿ.ಎಲ್.ಡಿ.ಇ. ನಂದಿನಿ ಪಾರ್ಲರ ಅಂಬಾ ಭವಾನಿ ಗುಡಿ ಹತ್ತಿರ ಗಚ್ಚಿನಕಟ್ಟಿ ಕಾಲೋನಿ, ಕರ್ನಾಟಕ ಒನ್,ಸಿಂದಗಿ ರೋಡ, ಹನುಮಾನ ಗುಡಿ ಹತ್ತಿರ, ಯೋಗಾಪೂರ ಕಾಲನಿ, ಕರ್ನಾಟಕ ಒನ್, ಹೊಸ ತಹಸಿಲ್ದಾರ ಆಫೀಸ್ ಎದುರಿಗೆ ಝಡ್.ಪಿ.ಕಾಂಪ್ಲೇಕ್ಸ್ ಮನಗೂಳಿ ರೋಡ, ಕರ್ನಾಟಕ ಒನ್, ಪ್ಲಾಟ ನಂ: 288 ಎಸ್.ಆರ್.ಕಾಲೋನಿ, ಜಲನಗರ ಮೇನ ರೋಡ ,ನಿಡೋಣಿ ಮೇಡಿಕಲ್ ಹತ್ತಿರ, ಕರ್ನಾಟಕ ಒನ್, ಅಂಗಡಿ ನಂ: 07 ಮೀನಾಕ್ಷಿ ಚೌಕ್, ಕರ್ನಾಟಕ ಒನ್, ಗಾಂಧಿ ಸ್ಕೂಲ, ಗ್ಯಾಂಗ ಬಾವಡಿ ದರ್ಗಾ ರೋಡ, ವಾರ್ಡ ನಂ:3,. ಕರ್ನಾಟಕ ಒನ್, ಬಸ್ ಸ್ಟ್ಯಾಂಡ ಹತ್ತಿರ ಕೆ.ಸಿ.ಮಾರ್ಕೆಟ್ ರೋಡ, ಮೀನಾಕ್ಷಿ ಚೌಕ ಇಲ್ಲಿ ತೆರಿಗೆಯನ್ನು ಪಾವತಿಸಬಹುದಾಗಿದೆ ಎಂದು ವಿಜಯಪುರ ಮಹಾನಗರ ಪಾಲಿಕೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಬಕವಿ–ಬನಹಟ್ಟಿ ನಗರಸಭೆ: ದಾಖಲೆಯ ಮನೆ ಕರ ವಸೂಲಿ

**ರಬಕವಿ–ಬನಹಟ್ಟಿ :** ಕಳೆದ 2023–24 ನೇ ಸಾಲಿನಲ್ಲಿ ರಬಕವಿ–ಬನಹಟ್ಟಿ ನಗರಸಭೆಯಲ್ಲಿನ ಮನೆ ಕರ ವಸೂಲಾತಿಯಲ್ಲಿ ಶೇ.85 ಕ್ಕಿಂತಲೂ ಹೆಚ್ಚಿನ ಒಟ್ಟು 3.5 ಕೋಟಿ ರೂ.ಗಳಷ್ಟು ಕರ ವಸೂಲಿ ಮಾಡುವ ಮೂಲಕ ದಾಖಲೆ ಮಾಡಿದೆ ಎಂದು ಪೌರಾಯುಕ್ತ ಜಗದೀಶ ಈಟಿ ತಿಳಿಸಿದರು.



ಸಾರ್ವಜನಿಕರ ಸಹಕಾರದಿಂದ ಈ ರೀತಿ ಕರ ವಸೂಲಾತಿಗೆ ಅನುಕೂಲವಾಗಿದ್ದು, ಮನೆ ಮನೆಗೆ ತೆರಳಿ ಕರ ವಸೂಲಿ ಬಗ್ಗೆ ಮನವರಿಕೆ ಮಾಡಿದ್ದಲ್ಲದೆ, ಜನತೆ ಸ್ವಯಂಪ್ರೇರಿತವಾಗಿ ನಗರಸಭೆಗೆ ಆಗಮಿಸಿ ಕರ ತುಂಬಿರುವದಕ್ಕೆ ಸಂತಸವೆನಿಸುತ್ತದೆ ಎಂದರು.

**ಸಬ್ಸಿಡಿ ಪ್ರಯೋಜನ ಪಡೆದುಕೊಳ್ಳಿ:** ಪ್ರಸಕ್ತ ವರ್ಷದ 2024–25 ನೇ ಸಾಲಿನ ಆರ್ಥಿಕ ವರ್ಷದ ಮಾರುಕಟ್ಟೆ ಮಾರ್ಗಸೂಚಿಂ–ಯಂತೆ ಬೆಲೆಯನ್ನು ಪರಿಷ್ಕರಣೆ ಮಾಡಿರುವ ನಗರಸಭೆಯು ಸದರಿ ದರಗಳ ಆಧಾರದ ಮೇರೆಗೆ ಆಸ್ತಿ ತೆರಿಗೆಯನ್ನು 2024–25 ನೇ ಸಾಲಿನದ್ದು ಏಪ್ರಿಲ್ ತಿಂಗಳೊಳಗಾಗಿ ನಗರಸಭೆಗೆ ಭರಣಾ ಮಾಡಿದ್ದಲ್ಲಿ ಶೇ.ಐದರಷ್ಟು ವಿನಾಯಿತಿಯನ್ನು ಸಾರ್ವಜನಿಕರ ಅನುಕೂಲಕ್ಕಾಗಿ ಕಲ್ಪಿಸಲಾಗಿದೆ ಎಂದು ನಗರಸಭಾ ಪೌರಾಯುಕ್ತ ಜಗದೀಶ ಈಟಿ ತಿಳಿಸಿದ್ದಾರೆ.

ಜನತೆ ಇದರ ಸದುಪಯೋಗ ಪಡೆದುಕೊಂಡು ನಗರದ ಅಭಿವೃದ್ಧಿಗಾಗಿ ತಮ್ಮ ಕೈ ಜೋಡಿಸುವಂತೆ ಕೋರಿದ್ದಾರೆ.

## ಸಾರ್ವಜನಿಕರ ಎಟಿಎಂ ಬದಲಾಯಿಸಿ ಹಣ ದೋಚುತ್ತಿದ್ದ ಕಳ್ಳರ ಪತ್ತೆ

**ಬಾಗಲಕೋಟೆ :** ಎಟಿಎಂ ಕೇಂದ್ರದಲ್ಲಿ ಸಾರ್ವಜನಿಕರ ಗಮನವನ್ನು ಬೇರೆ ಕಡೆಗೆ ಸೆಳೆದು ಎಟಿಎಂ ಕಾರ್ಡಗಳನ್ನು ಬದಲಾವಣೆ ಮಾಡಿ ಬೇರೆ ಬೇರೆ ಎಟಿಎಂಗಳಲ್ಲಿ ಸ್ವಾಫ್ ಮಷೀನ್‌ದಿಂದ ಹಣವನ್ನು ದೋಚುತ್ತಿದ್ದ ಇಬ್ಬರು ಆರೋಪಿಗಳನ್ನು ಪತ್ತೆ ಹಚ್ಚುವಲ್ಲಿ ಬಾಗಲಕೋಟೆ ಪೊಲೀಸ್ ಯಶಸ್ವಿಯಾಗಿದ್ದಾರೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಮರನಾಥ ರೆಡ್ಡಿ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾ–ರಿಗಳಾದ ಪ್ರಸನ್ನ ದೇಸಾಯಿ, ಮಹಾಂತೇಶ ಜಿದ್ದಿ ಮಾರ್ಗದರ್ಶನದಲ್ಲಿ ಎಟಿಎಂ ಕೇಂದ್ರದಲ್ಲಿ ಸಾರ್ವಜನಿಕರಿಗೆ ತಿಳಿಯದೇ ಅವರ ಎಟಿಎಂ ಕಾರ್ಡಗಳನ್ನು ಬದಲಾವಣೆ ಮಾಡಿಕೊಂಡು ಬೇರೆಡೆ ಹಣ ಡ್ರಾ ಮಾಡಿಕೊಳ್ಳುತ್ತಿದ್ದರು. ಈ ಜಾಲವನ್ನು ಪತ್ತೆ ಮಾಡಲು ಸಿಪಿಐ ಆರ್.ಎಸ್.ಬಿರಾದಾರ ನೇತೃತ್ವದ ತಂಡ ಆರೋಪಿಗಳನ್ನು ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಿದ್ದಾರೆ. ಆರೋಪಿಗಳು ಹರಿಯಾಣ ಮೂಲದವರಾಗಿದ್ದು, ಅವರಿಂದ 1.15 ಲಕ್ಷ ರೂ. ಗಳನ್ನು ಜಪ್ತ ಮಾಡಿಕೊಂಡಿದ್ದಾರೆ.




**ನೇಕಾರ ಸಮುದಾಯ ಒಕ್ಕೂಟದ ರಬಕವಿ–ಬನಹಟ್ಟಿ ಮಹಿಳಾ ವಿಭಾಗದ ಅಧ್ಯಕ್ಷೆಯಾಗಿ ಹೇಮಲತಾ ಪಟ್ಟಣ ಹಾಗು ಕಾರ್ಯದರ್ಶಿಣಿಯಾಗಿ ಮಂಜುಳಾ ಯಶವಂತ ಸೋರಗಾಂವಿ ಆಯ್ಕೆಗೊಂಡರು. ಇವರಿಗೆ ಜಿಲ್ಲಾಧ್ಯಕ್ಷೆ ಭಾಗ್ಯಶ್ರೀ ಹಂಡೆ ಪ್ರಮಾಣ ಪತ್ರ ನೀಡಿ ಗೌರವಿಸಿದರು.**

## ವಿದ್ಯುತ್ ಪ್ರಸರಣ: ಸಾರ್ವಜನಿಕರ ಗಮನಕ್ಕೆ

**ಬೆಳಗಾವಿ :** ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನಲ್ಲಿ ಕವಿಪ್ರನಿನಿಯ ಹಾಲಿ ಚಾಲ್ತಿಯಲ್ಲಿರುವ 110ಕೆವಿ 2ನೇ ವಿದ್ಯುತ್ ಪ್ರಸರಣ ಮಾರ್ಗವನ್ನು 220ಕೆವಿ ಅಥಣಿ ವಿದ್ಯುತ್ ಕೇಂದ್ರದಿಂದ 110ಕೆವಿ ಐಗಳಿ ವರೆಗೆ ಜೋಡಿ ಗೋಪುರಗಳ ಮೇಲೆ 21.493ಕಿಮೀ ಉದ್ದದ ಒಚಿಟಿ ಪ್ರಸರಣ ಮಾರ್ಗವನ್ನು ನಿರ್ಮಿಸಲಾಗಿದೆ.

110ಕೆವಿ ವಿದ್ಯುತ್ ಪ್ರಸರನ ಮಾರ್ಗವು ಬೆಳಗಾವಿ ಜಿಲ್ಲೆಯ, ಅಥಣಿ ತಾಲೂಕಿನ ಅಥಣಿ, ಕೊಟಗೇರಿ, ಬಡಚಿ, ದೇಸಾಯಿರಟ್ಟಿ, ಎಲಿಹಡಗಲಿ, ಐಗಳಿ ಹಾಗೂ ಅಕ್ಕಪಕ್ಕದ ಹದ್ದಿನಲ್ಲಿ ಬರುವ ಹಳ್ಳಿಗಳು ಮತ್ತು ಸರಹದ್ದಿನ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಲ್ಲಿ ಹಾಯ್ದು ಹೋಗುತ್ತದೆ.

ಸದರಿ ವಿದ್ಯುತ್ ಪ್ರಸರಣ ಮಾರ್ಗವನ್ನು ಏ.5 ಇಲ್ಲವೆ ತದನಂತರ ಯಾವುದೇ ಕ್ಷಣದಲ್ಲಿ ವಿದ್ಯುತ್‌ನ್ನು ಹರಿಬಿಡಲಾಗುವದು ಕಾರಣ ವಿದ್ಯುತ್ ಗೋಪುರಗಳನ್ನು ಹತ್ತುವುದಾಗಲಿ ಅಥವಾ ತಂತಿಗಳನ್ನು ಮುಟ್ಟುವುದಾಗಲಿ ಹಸಿರು ಟೊಂಗೆಗಳನ್ನು ಎಸೆಯುವುದಾಗಲಿ ಮತ್ತು ಲೈನ್ ಕೆಳಗಡೆ ದನಕರುಗಳನ್ನು ಕಟ್ಟುವುದಾಗಲಿ, ಗಿಡಮರಗಳನ್ನು ನೆಡುವುದಾಗಲಿ, ಮನೆ/ ಗುಡಿಸಲುಗಳನ್ನು ನಿರ್ಮಿಸುವುದಾಗಲಿ ಪ್ರಾಣಾಪಾಯಕವಾಗುವುದು. ಒಂದು ವೇಳೆ ಇಂತಹ ಕೃತ್ಯಗಳನ್ನು ಯಾರಾದರು ಎಸಗಿದಲ್ಲಿ ಮುಂದೆ ಒದಗಬಹುದಾದ ಅಪಾಯಗಳಿಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಜವಾಬ್ದಾರಿಯಾಗಿರುವುದಿಲ್ಲ ಎಂದು ಬೃಹತ್ ಕಾಮಗಾರಿ ವಿಭಾಗ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಬೆಳಗಾವಿಯ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

# ವಿಶ್ವ ಬೈ–ಪೋಲಾರ್ ದಿನಾಚರಣೆ

**ಧಾರವಾಡ :** ಧಾರವಾಡ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನಗಳ ಸಂಸ್ಥೆ (ಡಿಮ್ಹಾನ್ಸ್) ಧಾರವಾಡದ ಓ.ಪಿ.ಡಿ ವಿಭಾಗದಲ್ಲಿ ವಿಶ್ವ ಬೈ ಪೋಲಾರ್ ದಿನಾಚರಣೆಯ ಅಂಗವಾಗಿ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ವಿಶ್ವದಾದ್ಯಂತ ಪ್ರತಿ ವರ್ಷ ಮಾರ್ಚ 30 ರಂದು ಬೈಪೋಲಾರ್ ಮಾನಸಿಕ ಕಾಯಿಲೆಯ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತದೆ. ಈ ಅಂಗವಾಗಿ ಡಿಮ್ಹಾನ್ಸ್ ಸಂಸ್ಥೆಗೆ ಬರುವಂತಹ ರೋಗಿಗಳಿಗೆ ಮತ್ತು ಅವರ ಆರೈಕೆದಾರರುಗಳಿಗೆ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಡಿಮ್ಹಾನ್ಸ್ ಸಂಸ್ಥೆಯ ನಿರ್ದೇಶಕರಾದ ಡಾ. ಅರುಣಕುಮಾರವರು ಈ ಜಾಗೃತಿ ಕಾರ್ಯಕ್ರಮಕ್ಕೆ ಸಸಿಗೆ ನೀರುಣಿಸುವುದರ ಮೂಲಕ ಚಾಲನೆ ನೀಡಿ, ಬೈ ಪೋಲಾರ್ ಮಾನಸಿಕ ಕಾಯಿಲೆಯ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಬೈ ಪೋಲಾರ್ ಒಂದು ಕ್ಲಿಷ್ಟಕರ ಮಾನಸಿಕ ಕಾಯಿಲೆಯಾಗಿದ್ದು, ಈ ಕಾಯಿಲೆಯು ಕೇವಲ ಅವರ ಮನಸ್ಥಿತಿ ಮೇಲೆ ಪರಿಣಾಮ ಬೀರುವುದಲ್ಲದೇ, ಅವರ ಜೀವನದ ಮೇಲೆ, ಕುಟುಂಬದ ಸದಸ್ಯರ ಮೇಲೆ ಹಾಗೂ ಸಮುದಾಯ ಮೇಲೆ ಪ್ರಭಾವ ಬೀರುತ್ತದೆ. ಈ ಕಾಯಿಲೆಯಲ್ಲಿ ಉನ್ಮಾದ ಹಾಗೂ ಖಿನ್ನತೆಯ ಲಕ್ಷಣಗಳು ಕೂಡಿಕೊಂಡಿರುತ್ತವೆ. ಉನ್ಮಾದ ಕಾಯಿಲೆ ಲಕ್ಷಣಗಳೆಂದರೆ ಅತಿಯಾದ ಸಿಟ್ಟು, ಮಾತನಾಡುವುದು, ಚಟುವಟಿಕೆಗಳು ಹಾಗೂ ಆತ್ಮಪ್ರತಿಷ್ಠೆ ಇತರ ಲಕ್ಷಣಗಳು ಇರುತ್ತವೆ.

ಖಿನ್ನತೆಯಲ್ಲಿ ಅತಿಯಾದ ಬೇಸರ, ದು:ಖ, ಕೆಲಸಗಳಲ್ಲಿ ನಿರಾಸಕ್ತಿ, ಸಾಮಾಜಿಕವಾಗಿ ಬೇರೆಯವರೊಂದಿಗೆ ಬೆರೆಯಲು ಆಸಕ್ತಿ ಇರದೇ ಇರುವುದು ಮತ್ತು ಆತ್ಮಹತ್ಯೆ ಯೋಚನೆಗಳು ಇತ್ಯಾದಿ ಲಕ್ಷಣಗಳು ಇರುತ್ತವೆಂದು ತಿಳಿಸಿದರು.

ಇದರ ಜೊತೆಗೆ ಬೈ ಪೋಲಾರ್ ಕಾಯಿಲೆಯ ಬಗ್ಗೆ ಇರುವ ತಪ್ಪು ಕಲ್ಪನೆಗಳನ್ನು ತಿಳಿದುಕೊಂಡು, ಇವುಗಳನ್ನು ಹೋಗಲಾಡಿಸಲು ಪ್ರಯತ್ನಿಸಬೇಕೆಂದರು. ಈ ಕಾಯಿಲೆಯು ವ್ಯಕ್ತಿಯ ದೌರ್ಬಲ್ಯತೆ ಅಥವಾ ವ್ಯಕ್ತಿತ್ವದ ನ್ಯೂನ್ಯತೆಯೆಂದು ತಿಳಿಯಬಾರದು. ಇಂತಹ ಕಾಯಿಲೆಯಿಂದ ಬಳಲುತ್ತಿರುವವರಿಗೆ ಮನೋವೈದ್ಯರನ್ನು ಸಂಪರ್ಕಿಸಿ ಸರಿಯಾದ ಚಿಕಿತ್ಸೆ ಮತ್ತು ಔಷಧೋಪಚಾರವನ್ನು ಕೊಡಿಸುವುದರಿಂದ ಗುಣಮುಖರಾಗಿ ಸಮಾಜದಲ್ಲಿ ಎಲ್ಲರೊಂದಿಗೆ ಬೆರೆತು ಜೀವನ ಮಾಡಲು ನೆರವಾಗುತ್ತದೆಂದರು.




ಡಿಮ್ಹಾನ್ಸ್ ಸಂಸ್ಥೆಯಿಂದ ಇಂತಹ ರೋಗದಿಂದ ಬಳಲುತ್ತಿರುವವರಿಗೆ ಉತ್ತಮವಾದ ಚಿಕಿತ್ಸೆ, ವೈದ್ಯಕೀಯ ಸೇವೆ, ಉತ್ತಮವಾದ ಮಾನಸಿಕ ಆರೋಗ್ಯ ಸೇವೆಗಳು, ಗುಣಮಟ್ಟದ ಚಿಕಿತ್ಸೆ ಹಾಗೂ ಸಹಕಾರವನ್ನು ದೊರಕಿಸಿಕೊಡಲು ಪ್ರಾಮಾಣಿಕ ಪ್ರಯತ್ನವನ್ನು ಮಾಡಲಾಗುತ್ತಿದೆ ಹಾಗೂ ಇಂತಹ ರೋಗಿಗಳ ಹಕ್ಕುಗಳ ಬದ್ದತೆಯನ್ನು ಕಾಪಾಡಲು ಎಲ್ಲಾ ರೀತಿಯ ಪ್ರಯತ್ನ ಮಾಡಲಾಗುತ್ತಿದೆಯೆಂದರು.

ಮನೋವೈದ್ಯಕೀಯ ಸಮಾಜಕಾರ್ಯ ವಿಭಾಗದ ಮುಖ್ಯಸ್ಥರಾದ ಡಾ.ಸತೀಶ್ ಕೌಜಲಗಿ ರವರು ಮಾನಸಿಕ ಕಾಯಿಲೆಗಳ ಲಕ್ಷಣಗಳು, ಆರೈಕೆದಾರರಿಗೆ ಇರಬೇಕಾದ ಜವಾಬ್ದಾರಿಗಳು, ಚಿಕಿತ್ಸಾ ಸೌಲಭ್ಯಗಳ ಬಗ್ಗೆ ವಿವರಿಸಿದರು.

ಬೈ ಪೋಲಾರ್ ಕಾಯಿಲೆಯಿಂದ ಬಳಲುತ್ತಿರುವ ವ್ಯಕ್ತಿಯೊಬ್ಬರು ತಾವು ಚಿಕಿತ್ಸೆ ಪಡೆದುಕೊಂಡು ಗುಣಮುಖರಾಗಿರುವುದರ ಬಗ್ಗೆ ತಮ್ಮ ಅನುಭವಗಳನ್ನು ಹಂಚಿಕೊಂಡರು. ಈ ಕಾರ್ಯಕ್ರಮದಲ್ಲಿ ಸೈಕಿಯಾಟ್ರಿ ವಿಭಾಗದ ಸಹಪ್ರಾಧ್ಯಾಪಕರಾದ ಡಾ. ಶ್ರೀನಿವಾಸ ಕೊಸಗಿ, ಡಾ. ಮಂಜುನಾಥ ಭಜಂತ್ರಿ ರವರು ಅತಿಥಿಗಳಾಗಿ ಭಾಗವಹಿಸಿದ್ದರು.

ಕಾರ್ಯಕ್ರಮದ ನಿರೂಪಣೆಯನ್ನು ಎಂ.ಫಿಲ್ ವಿದ್ಯಾರ್ಥಿನಿ ಅಕ್ಷತಾ ತೋಟಗೇರ್ ರವರು ನಿರೂಪಿಸಿದರು. ಕಾವೇರಿ ಕಿತ್ತೂರು ರವರು ಪ್ರಾರ್ಥಿಸಿದರು. ವಿನೋದಾ ಹಿರೆಮಠ ರವರು ಸ್ವಾಗತಿಸಿದರು. ರಾಕೇಶ್ ರವರು ವಂದಿಸಿದರು.

ಕಾರ್ಯಕ್ರಮದಲ್ಲಿ ಮನೋವೈದ್ಯಕೀಯ ಸಮಾಜಕಾರ್ಯ ವಿಭಾಗದ ಸಿಬ್ಬಂದಿಗಳಾದ ಅಶೋಕ ಕೋರಿ, ಓಬಾ ನಾಯ್ಕ, ಪ್ರಶಾಂತ ಪಾಟೀಲ್, ಆರ್.ಎಮ್.ತಿಮ್ಮಾಪೂರ್, ಶ್ರೀದೇವಿ ಬಿರಾದಾರ, ಅನಂತರಾಮು ಬಿ.ಜಿ ಹಾಗೂ ಸೈಕಿಯಾಟ್ರಿಕ್ ನಸಿಂಗ್ ವಿಭಾಗದ ಮುಖ್ಯಸ್ಥರಾದ ಡಾ. ಆರ್.ಶ್ರೀವಾಣಿ ಹಾಗೂ ಉಪನ್ಯಾಸಕರಾದ ಡಾ. ಸುಶೀಲ್‌ಕುಮಾರ್ ರೋಣದ, ಫಿಜಿಯೋಥೇರಪಿಸ್ಟ್ ಡಾ. ಇಸ್ಮೈಲ್ ರವರು, ಎಂ.ಫಿಲ್ ಇನ್ ಸೈಕಿಯಾಟ್ರಿಕ್ ಸೋಷಿಯಲ್ ವರ್ಕ ವಿಭಾಗದ ವಿದ್ಯಾರ್ಥಿಗಳಾದ ಲಕ್ಷ್ಮೀ ಮಲ್ಲಿಕ್, ಮೋನಿಶಾ, ರಂಜನಿ, ಸಚಿನ್ ಪ್ರಸಾದ್, ಯತೀಶ್ ಭಾರದ್ವಾಜ್ ರವರು ಉಪಸ್ಥಿತರಿದ್ದರು.

# ಶ್ರೀ ಅಗ್ನಿಬನ್ನಿರಾಯಸ್ವಾಮಿ ಜಯಂತಿ

**ಧಾರವಾಡ :** ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶ್ರೀ ಅಗ್ನಿಬನ್ನಿರಾಯಸ್ವಾಮಿ ಜ ಂ ಯ ಂ ತಿ ಯ ನ್ನ ು ಆಚರಿಸಲಾಯಿತು.



ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ., ಅವರು ಶ್ರೀ ಅಗ್ನಿಬನ್ನಿರಾಯಸ್ವಾಮಿ ಅವರ ಭಾವಚಿತ್ರಕ್ಕೆ ಪೂಜೆಯೊಂದಿಗೆ ಪುಷ್ಪಾರ್ಪಣೆ ಸಲ್ಲಿಸಿ, ನಮಿಸಿದರು. ಲೋಕಸಭಾ ಚುನಾವಣೆ ಹಿನ್ನಲೆಯಲ್ಲಿ ಜಯಂತಿ ಕಾರ್ಯಕ್ರಮವನ್ನು ಸರಳವಾಗಿ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕುಮಾರ ಬೆಕ್ಕೇರಿ, ವಿವಿಧ ಸಮಾಜ ಗಣ್ಯರು, ಹಿರಿಯ ನಾಗರಿಕರು, ಸಾರ್ವಜನಿಕರು ಉಪಸ್ಥಿತರಿದ್ದರು.

# ಗುರುಕಾರುಣ್ಯದಿಂದ ಸರ್ವಸಾಧ್ಯ: ಗಂಗಾಧರ ಬುದ್ನಿ ಶ್ರೀ



**ರಬಕವಿ-ಬನಹಟ್ಟಿ :** ನೀನೊಲಿದರೆ ಕೊರಡು ಕೊನರುವುದಯ್ಯಾ ಎಂಬ ಬಸವಣ್ಣನವರ ವಚನದಂತೆ ಗುರುಕಾರುಣ್ಯ ಹೊಂದಿದ ಭಕ್ತನಿಗೆ ಸಕಲವೂ ಸುಲಭ ಮತ್ತು ಸರ್ವಸಾಧ್ಯವಾಗುತ್ತದೆ. ಮಾತೃ ಹೃದಯ, ತಂದೆಯ ವಾತ್ಸಲ್ಯ ಜೊತೆಗೆ ಶಿಕ್ಷಕನ ಬೋಧನಾ ಗುಣಗಳು ಓರ್ವ ಗುರುವಿನಲ್ಲಿ ಅಡಕಗೊಂಡಿರುತ್ತವೆ. ಸಮರ್ಥ ಗುರು ತನ್ನ ಶಿಷ್ಯರನ್ನು ಸರ್ವ ವಿಧದಿಂದಲೂ ಮತ್ತು ಸರ್ವ ಕಾಲದಲ್ಲಿಯೂ ರಕ್ಷಿಸುತ್ತ , ಶಿಷ್ಯ ಸನ್ಮಾರ್ಗದ ಪಥದಲ್ಲಿ ಸದಾ ನಡೆಯುವಂತೆ ಮತ್ತು ಇಹ-ಪರಗಳೆರಡರಲ್ಲೂ ಸರ್ವಥಾ ಮಾನ್ಯನಾಗುವಂತೆ ಸನ್ಮಾರ್ಗದ ದಾರಿಯನ್ನೇ ತೋರುತ್ತಾನೆಂದು ಬನಹಟ್ಟಿ ಶ್ರೀದೇವಿ ಮಠದ ಗಂಗಾಧರ ಬುದ್ನಿ ಮಹಾರಾಜರು ನುಡಿದರು.

ರಾಮಪುರದ ಹೂಗಾರ ತೋಟದಲ್ಲಿ ಶ್ರೀಮದ್ ಜಗದ್ಗುರು ಶ್ರೀಮಲ್ಲಿಕಾರ್ಜುನ ಶಂಕರ ಶಿವಾಚಾರ್ಯ ಶಿವಯೋಗಿಗಳ 66 ನೇ ಗುರುವಂದನಾ ಸಮಾರಂಭದಲ್ಲಿ ಸಾನಿಧ್ಯ ವಹಿಸಿ ಮಾತನಾಡಿದ ಶ್ರೀಗಳು ಭಕ್ತರನ್ನು ಸದಾ ಸಲಹುವ ಗುಣಗ್ರಾಹಿಯೇ ಗುರುವಾಗಿರುತ್ತಾನೆಂದರು.

ಹೊಸೂರಿನ ಪರಮಾನಂದಶ್ರೀಗಳು ಮಾತನಾಡಿ ಭಕ್ತರ, ಶಿಷ್ಯರ ಆತ್ಮೋನ್ನತಿಗೆ ಅಹರ್ನಿಶಿ ಶ್ರಮಿಸುವ ಸದ್ಗುರುವು ಸತ್-ಚಿತ್-ಆನಂದದ ಪ್ರಭೆಯನ್ನು ತನ್ನ ಬಳಿ ಬಂದವರಿಗೆ ತುಂಬುವ ಮೂಲಕ ಪರಿಪೂರ್ಣತೆಯನ್ನು ಬೆಳಗಿಸುತ್ತಾನೆಂದರು.

ಶಿವಾಪುರದ ಚಿದಾನಂದ ಗುರುಗಳು ಮಾತನಾಡಿ ಸಕಲರ ಲೇಸನ್ನೇ ಬಯಸುತ್ತ , ತನ್ನ ಬದುಕನ್ನು ಪರರ ಕಲ್ಯಾಣ, ಅಭ್ಯುದಯಕ್ಕೆ ಕರ್ಪೂರದಂತೆ ಬದುಕುವ ಗುರು ಜಗವಂದ್ಯನಾಗಿದ್ದಾನೆಂದರು.

ಈ ಸಂದರ್ಭದಲ್ಲಿ ರಾಮಪುರದ ರುದ್ರಪ್ಪ ಅರಳಿಕಟ್ಟಿ, ಕರಬಸು ಹಟ್ಟಿ, ಮಲ್ಲಿಕಾರ್ಜುನ ಹೊಸಮನಿ, ಮಹಾದೇವ ಬಾಡಗಂಡಿ, ರಾಚಪ್ಪಣ್ಣಾ ಸಂಕಾನಟ್ಟಿ, ಸತೀಶ ಕಲಾದಗಿ, ಹೊಸೂರಿನ ಮಹಾಲಿಂಗ ಕರಿಜಾಡರ, ಬಸವರಾಜ ಕರಿಜಾಡರ, ಈರಪ್ಪ ಬುದ್ನಿ, ಬನಹಟ್ಟಿಯ ಮಹಾದೇವ ಆಸಂಗಿ, ಪ್ರಕಾಶ ಅರಳಿಕಟ್ಟಿ, ಬಸವರಾಜ ನುಚ್ಚಿ, ಶಿದ್ದರಾಯ ಸಂಕ್ರಟ್ಟಿ, ಶಂಕರೆಪ್ಪ ಬಾಡಗಂಡಿ, ರಬಕವಿಯ ಮಹಾದೇವ ಆರಗಿ, ಈರಪ್ಪ ಮನ್ಮಿ , ಈರಪ್ಪ ಮೂಲಿಮನಿ, ತೇರದಾಳದ ಬಸವರಾಜ ಚಿಂಚಖಂಡಿ, ಅಪ್ಪಾಸಾಬ ಹಳ್ಯಾಳ, ಅನಿಲ ಬಾಗಿ, ಪರಮಾನಂದ ಹಳ್ಳಿ, ಚಂದ್ರಶೇಖರ ಮುಂಡಗನೂರ, ಜಗದೀಶ ಬಡಿಗೇರ, ಈಶ್ವರ ಜಂಬಗಿ ಮೊದಲಾದವರು ಉಪಸ್ಥಿತರಿದ್ದರು.

# ಹಿರಿಯ ಪತ್ರಕರ್ತ ರಾಮು ಕಾಡಾಪೂರ ನಿಧನ



**ರಬಕವಿ :** ಇಲ್ಲಿಯ ಉಪ್ಪಾರ ಸಮಾಜದ ಹಿರಿಯರು, ಕಲ್ಯಾಣಪರ್ವ ಪತ್ರಿಕೆಯ ವರದಿಗಾರರು ಆಗಿದ್ದ ರಾಮು ಬಾಳಪ್ಪ ಕಾಡಾಪೂರ ತಮ್ಮ ೫೬ ನೆಯ ವಯಸ್ಸಿನಲ್ಲಿ ಎಪ್ರೀಲ್ ೨ ರಂದು ರಾತ್ರಿ ಅಸುನೀಗಿದ್ದಾರೆ. ಅವರನ್ನು ಕೆಲವು ದಿನಗಳ ಹಿಂದೆ ಕೊಲ್ಲಾಪುರದ ಕಣೇರಿ ಮಠದ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ದಾಖಲಿಸಲಾಗಿತ್ತು. ಅವರು ತಮ್ಮ ಹಿಂದೆ ಇಬ್ಬರು ಗಂಡು ಮಕ್ಕಳನ್ನು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ದೇವರು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಎಂದು 'ಧಡಲ್ ಬಾಜಿ' ಕನ್ನಡ ದಿನ ಪತ್ರಿಕೆ ಬಳಗದಿಂದ ಪ್ರಾರ್ಥಿಸುತ್ತೇವೆ.

# ಗ್ಯಾರೆಂಟಿಗಳು ಕಾಂಗ್ರೆಸ್ ಗೆಲುವಿಗೆ ವರದಾನವಾಗಲಿವೆ: ಸಚಿವ ತಿಮ್ಮಾಪುರ



**ಮುಧೋಳ :** ಬಿಜೆಪಿಯ ಸುಳ್ಳಿನ ಮಾತುಗಳನ್ನು ಮತದಾರರು ನಂಬುವುದಿಲ್ಲ ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಗ್ಯಾರಂಟಿಗಳು ಕಾಂಗ್ರೆಸ್ ಗೆಲುವಿಗೆ ವರದಾನವಾಗಲಿವೆ ಎಂದು ಕಾಂಗ್ರೆಸ್ ಕಚೇರಿಯಲ್ಲಿ ಅಬಕಾರಿ ಸಚಿವರಾದ ಸಚಿವ ಆರ್ ಬಿ ತಿಮ್ಮಾಪುರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ನಗರದ ಕಾಂಗ್ರೆಸ್ ಕಚೇರಿಯಲ್ಲಿ ಸಚಿವರು ಸುದ್ದಿಗೋಷ್ಠಿ ನಡೆಸಿ ಬಿಜೆಪಿ ವಿರುದ್ಧ ಹರಿ ಹಾಯದರು ಬಿಜೆಪಿಯ ಕಾರ್ಯ ವೈಫಲ್ಯ ಸುಳ್ಳಿನ ಭರವಸೆಗಳು ಮತ್ತು ಗ್ಯಾರಂಟಿಗಳು ಕಾಂಗ್ರೆಸ್ ಗೆಲುವಿಗೆ ವರದಾನವಾಗಲಿವೆ. ಬಿಜೆಪಿಯವರು ಯುವಕರಿಗೆ ಎರಡು ಕೋಟಿ ಒಂದು ವರ್ಷಕ್ಕೆ ಉದ್ಯೋಗ ಕೊಡಲಿಲ್ಲ. ಸ್ಮಾರ್ಟ್ ಚೀಟಿ ಮಾಡಲಿಲ್ಲ. ಬುಲೆಟ್ ಟ್ರೈನ್ ತರಸಲಿಲ್ಲ. 15 ಲಕ್ಷ ಹಣ ಅಕೌಂಟಿಗೆ ಹಾಕಲಿಲ್ಲ. ಭೇಟಿ ಪಡಾವೋ ಭೇಟಿ ಬಚಾವೋ ಹಾಗೆ ಉಳಿಯಿತು. ಸ್ವಚ್ಛ ಭಾರತ ಅದು ಹಾಗೆ ಉಳಿಯಿತು. ದೇಶದ ಅಭಿವೃದ್ಧಿಗೆ ಮಾಡಿದ ಸಾಧನೆ ಏನು. ಒಮ್ಮೆಯು ಕೂಡ ಪತ್ರಿಕಾಗೋಷ್ಠಿ ನಡೆಸದ ಪ್ರಧಾನಿ ಎಂದು ಬಿಜೆಪಿ ವಿರುದ್ಧ ಹರಿಹಾಯ್ದರು. ಈ ಭಾಗದ ಸಂಸದರ ಸಾಧನೆ ಶೂನ್ಯ.20 ವರ್ಷ ಕ್ಷೇತ್ರದ ಜನತೆಯ ಮತ ಪಡೆದು ಕ್ಷೇತ್ರಕ್ಕೆ ಅಭಿವೃದ್ಧಿ ಮಾಡಲಿಲ್ಲ ಕ್ಷೇತ್ರಕ್ಕೆ ಇವರ ಅಭಿವೃದ್ಧಿ ಶೂನ್ಯ. ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ನಿಂದ ಸಂಯುಕ್ತ ಪಾಟೀಲ್ ಅವರ ಗೆಲುವು ಖಚಿತ ಎಂದು ಹೇಳಿದರು. ರಾಜ್ಯದಲ್ಲಿ ಸುಮಾರು 20ಕ್ಕಿಂತ ಹೆಚ್ಚು ಸಂಸದರುಗಳು ಆಯ್ಕೆಯಾಗುತ್ತಾರೆ ಎಂದು ಹೇಳಿದರು. ಉದಯ ಸಿಂಹ ಪಡತರೆ ಮಾತನಾಡಿ ಮಹಾರಾಷ್ಟ್ರದಲ್ಲಿನ ಸಂಸದರು ಹೆಚ್ಚಿಗೆ ಅನುದಾನವನ್ನು ತಂದಿದ್ದಾರೆ ನಮ್ಮ ಕ್ಷೇತ್ರದ ಸಂಸದರು ಅನುದಾನ ತರುವಲ್ಲಿ ವಿಫಲರಾಗಿದ್ದಾರೆ ಇಂತಹ ಅಸಮರ್ಥ ನಾಯಕರು ನಮ್ಮ ಕ್ಷೇತ್ರಕ್ಕೆ ಬೇಡ ಆದರಿಂದ ಸಂಯುಕ್ತ ಪಾಟೀಲ್ ಅವರನ್ನು ಬಾಗಲಕೋಟೆ ಲೋಕಸಭಾ ಕ್ಷೇತ್ರಕ್ಕೆ ಕಾಂಗ್ರೆಸ್ ಪಕ್ಷದಿಂದ ಪ್ರಚಂಡ ಬಹುಮತದಿಂದ ಆಯ್ಕೆ ಮಾಡಲು ಶ್ರಮ ವಹಿಸುತ್ತೇವೆ ಎಂದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷ ಅಶೋಕ್ ಕಿವಿಡಿ ಕಾಂಗ್ರೆಸ್ ಮುಖಂಡ ಉದಯ್ ಸಿಂಗ್ ಉದಯ್ ಸಾರ್ವಾಡ್ ಮುದುಕಣ್ಣ ಅಂಬಿಗೇರ್ ಎಸ್ ಟಿ ದಾನಪ್ಪಗೌಡ ರಮೇಶ್ ಇನ್ನು ಮುಂತಾದವರು ಉಪಸ್ಥಿತರಿದ್ದರು.

# ಪೊಲೀಸ್ ಸೇವೆ ಸ್ಮರಣೀಯ: ಜಿಲ್ಲಾಧಿಕಾರಿ ಟಿ.ಭೂಬಾಲನ್

**ವರದಿ:ಲಾಲಸಾಬ ಸವಾರಗೋಳ**



**ವಿಜಯಪುರ :** ಪೊಲೀಸ್ ಪೇದೆಯಿಂದ ಹಿಡಿದು ಐಜಿಪಿ ವರೆಗಿನ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯ ಸೇವೆಯು ಸದಾ ಸ್ಮರಿಸುವಂತಾಗಿರುತ್ತದೆ ಎಂದು ಜಿಲ್ಲಾಧಿಕಾರಿ ಟಿ. ಭೂಬಾಲನ್ ಹೇಳಿದರು.

ನಗರದ ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ಪೊಲೀಸ್ ಇಲಾಖೆಯಿಂದ ಹಮ್ಮಿಕೊಂಡಿದ್ದ ವಿಜಯಪುರ ಜಿಲ್ಲಾ ಪೊಲೀಸ್ ಕಲ್ಯಾಣ ಹಾಗೂ ಧ್ವಜ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ದೇಶದಲ್ಲಿ ಎಷ್ಟೇ ಸಮಸ್ಯೆಗಳು ಉದ್ಭವಿಸಿದರೂ ಕಾನೂನನ್ನು ಅನುಷ್ಠಾನಗೊಳಿಸಿ ಸಾರ್ವಜನಿಕರು ನೆಮ್ಮದಿಯಿಂದ ಇರಲು ಪೊಲೀಸ್ ಇಲಾಖೆ ಶ್ರಮಿಸುವದರಿಂದ ಪೊಲೀಸ್ ಸೇವೆ ಸ್ಮರಣೀಯವಾಗಿದೆ ಎಂದರು.

ನಿವೃತ್ತರಾಗಿರುವ ಪೊಲೀಸ್ ಸಿಬ್ಬಂದಿ ಮತ್ತು ಅಧಿಕಾರಿಗಳ ಸೇವೆಯನ್ನು ಸ್ಮರಿಸಿ, ಗೌರವಿಸುವುದಸುವುದಕ್ಕಾಗಿಯೇ ಪೊಲೀಸ್ ಕಲ್ಯಾಣ ಹಾಗೂ ಧ್ವಜ ದಿನಾಚರಣೆ ಆಚರಿಸಲಾಗುತ್ತದೆ.

ನಿವೃತ್ತರಾದವರಿಗೆ ಸಮಸ್ಯೆಗಳು ಏನಾದರೂ ಇದ್ದಲ್ಲಿ ಜಿಲ್ಲಾಡಳಿತವನ್ನು ಸಂಪರ್ಕಿಸಿದಲ್ಲಿ ಸಮಸ್ಯೆ ಬಗೆಹರಿಸಲು ಪ್ರಯತ್ನಿಸಲಾಗುವುದು. ವಿವಿಧ ಇಲಾಖೆಗಳಿಂದ ಸಿಗುವ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಬೇಕು.

ಪ್ರಸ್ತುತ ಚುನಾವಣೆ ಕರ್ತವ್ಯಕ್ಕೆ ನಿಯೋಜನೆಗೊಂಡಿರುವ ಪೊಲೀಸ್ ಸಿಬ್ಬಂದಿ ಉತ್ಸಾಹದಿಂದ ಕರ್ತವ್ಯ ನಿರ್ವಹಿಸುವದರೊಂದಿಗೆ ನ್ಯಾಯ ಸಮ್ಮತ, ನಿಷ್ಪಕ್ಷಪಾತವಾಗಿ ಕಾರ್ಯ ನಿರ್ವಹಿಸಬೇಕು ಎಂದು ಸೂಚಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಿಶಿ ಆನಂದ ಮಾತನಾಡಿ ಸಮಾಜದಲ್ಲಿ ಶಾಂತಿ, ಸುವ್ಯವಸ್ಥೆ ಕಾಪಾಡುವಲ್ಲಿ ಪೊಲೀಸ್ ಇಲಾಖೆ ಪಾತ್ರ ಪ್ರಮುಖವಾಗಿದೆ. ಜವಾಬ್ದಾರಿ ಅರಿತು ಕರ್ತವ್ಯ ನಿರ್ವಹಿಸಿದಲ್ಲಿ ಸಹಜವಾಗಿ ಜನಮನ್ನಣೆ ದೊರೆಯುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಋಷಿಕೇಶ ಸೋನಾವಣೆ ಅವರು ಪೊಲೀಸ್ ಇಲಾಖೆಯ ವಿವಿಧ ಚಟುವಟಿಕೆಗಳ ವಾರ್ಷಿಕ ವರದಿಯನ್ನು ಓದಿದರು. ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಇಂಡಿ ಗ್ರಾಮೀಣ ಠಾಣೆಯ ನಿವೃತ್ತ ಪೊಲೀಸ್ ಉಪ ನಿರೀಕ್ಷಕ ಜಿ.ಎಸ್.ಚಕ್ಕಡಿ ಅವರು ಕವಾಯತು ತಂಡಗಳ ಪರಿವೀಕ್ಷಣೆ ಹಾಗೂ ಗೌರವ ವಂದನೆ ಸ್ವೀಕರಿಸಿದರು. ಪ್ರೊಬೆಷನರಿ ಡಿವೈಎಸ್ಪಿ ಮುರ್ತುಜಾ ಖಾದ್ರಿ ನೇತೃತ್ವದಲ್ಲಿ ಆರು ತುಕಡಿಗಳ ಆಕರ್ಷಕ ಪಥಸಂಚಲನ ನಡೆಯಿತು. ಡಿಸಿ, ಸಿಇಒ ಹಾಗೂ ಎಸ್ಪಿ ಸಮ್ಮುಖದಲ್ಲಿ ಪೊಲೀಸ್ ಧ್ವಜಗಳನ್ನು ಬಿಡುಗಡೆಗೊಳಿಸಿ ವಿತರಿಸಲಾಯಿತು. 2023ನೇ ಸಾಲಿನಲ್ಲಿ ನಿವೃತ್ತರಾದ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ಸನ್ಮಾನಿಸಲಾಯಿತು ನಂತರ ಜಿಲ್ಲಾ ಆಸ್ಪತ್ರೆ ಸಹಯೋಗದಲ್ಲಿ ರಕ್ತದಾನ ಶಿಬಿರ ಜರುಗಿಸಲಾಯಿತು.

ಹೆಚ್ಚುವರಿ ಪೊಲೀಸ್ ಅಧೀಕ್ಷಕ-1 ಶಂಕರ ಕೆ. ಮಾರಿಹಾಳ ಸ್ವಾಗತಿಸಿದರು, ಪಿಎಸ್ಐ ಕೃಷ್ಣವೇಣಿ ಹಾಗೂ ಪೊಲೀಸ್ ಪೇದೆ ದಶರಥ ನಿರೂಪಿಸಿದರು. ಹೆಚ್ಚುವರಿ ಪೊಲೀಸ್ ಅಧೀಕ್ಷಕ-2 ರಾಮನಗೌಡ ಹಟ್ಟಿ ವಂದಿಸಿದರು.

# ಪೋಕ್ಸೋ ಪ್ರಕರಣ: ಆರೋಪಿಗಳಿಗೆ 10 ವರ್ಷಗಳ ಜೈಲು ಶಿಕ್ಷೆ ಪ್ರಕಟ

**ಕೊಪ್ಪಳ :** ಅಪ್ರಾಪ್ತ ವಯಸ್ಸಿನ ಬಾಲಕಿಯನ್ನು ಅಪಹರಿಸಿ, ಅತ್ಯಾಚಾರ ಎಸಗಿದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಆರೋಪಿಗಳಿಗೆ 10 ವರ್ಷಗಳ ಜೈಲು ಶಿಕ್ಷೆ ವಿಧಿಸಿ ಕೊಪ್ಪಳ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯ ಹಾಗೂ ತ್ವರಿತ ವಿಲೇವಾರಿ ನ್ಯಾಯಾಲಯ(ಪೋಕ್ಸೋ)ವು ತೀರ್ಪು ಪ್ರಕಟಿಸಿದೆ.

ಕೊಪ್ಪಳದ ಮುನಿರಾಬಾದ್ ಠಾಣೆ ವ್ಯಾಪ್ತಿಯ ಹುಲಗಿಯ ಹುಲಿಗೆಮ್ಮ ದೇವಸ್ಥಾನ ಹತ್ತಿರ ಜಾತ್ರೆ ಸಲುವಾಗಿ ಹಾಕಿದ ಮನರಂಜನೆ ಆಟದ ತೊಟ್ಟಿಲು ಹತ್ತಿರ ಹಾಗೂ ರೈಲ್ವೆ ಹಳಿ ಪಕ್ಕದಲ್ಲಿ ಪ್ಲಾಸ್ಟಿಕ್ ಬಾಟಲಿಗಳನ್ನು ಆರಿಸುತ್ತಿದ್ದ ಅಪ್ರಾಪ್ತ ಬಾಲಕಿಯನ್ನು ಕಂಡ ಅಪರಾಧಿಗಳಾದ ಎ-1 ಶಬ್ಬೀರ, ಎ-2 ಕಾರ್ತಿಕ ಈ ಇಬ್ಬರೂ ದುಡ್ಡು ಕೊಡುತ್ತೇವೆ ನಮ್ಮೊಂದಿಗೆ ಬಾ ಎಂದು ಬಾಲಕಿಯನ್ನು ಅಪಹರಿಸಿ, ಒತ್ತಾಯ ಪೂರ್ವಕವಾಗಿ ಕರೆದುಕೊಂಡು ಹೋಗಿ ಅವಳಿಗೆ ಐಸ್ ಕ್ರೀಮ್, ಚಾಕಲೇಟ್ ಕೊಟ್ಟು ತುಂಗಭದ್ರಾ ಹೊಳೆ ಹಿಂದೆ ಹೊಸೂರು ರಸ್ತೆಯಲ್ಲಿರುವ ಒಂದು ಕಬ್ಬಿನ ಗದ್ದೆಗೆ ಕರೆದುಕೊಂಡು ಹೋಗಿ ಅಲ್ಲಿ ಅಪರಾಧಿಗಳು ಬಾಧಿತಳ ಮೇಲೆ ಬಲವಂತದ ಅತ್ಯಾಚಾರ ಮಾಡಿದ ಆರೋಪ ತನಿಖೆಯಲ್ಲಿ ಸಾಭಿತಾಗಿದ್ದರಿಂದ ಕೊಪ್ಪಳ ಪೊಲೀಸ್ ಉಪಾಧೀಕ್ಷಕರಾದ ಶ್ರೀಕಾಂತ ಕಟ್ಟಿಮನಿ ಅವರು ಅಪರಾಧಿಗಳ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು.

ಪ್ರಕರಣವು ವಿಚಾರಣೆಯಲ್ಲಿ ಅಪರಾಧಿಗಳ ಮೇಲಿನ ಆರೋಪಣೆಗಳು ಸಾಭೀತಾಗಿದೆ ಎಂದು 10 ವರ್ಷಗಳ ಜೈಲು ಶಿಕ್ಷೆ ಹಾಗೂ ರೂ.35,000 ಗಳ ದಂಡವನ್ನು ವಿಧಿಸಿ, ಕೊಪ್ಪಳ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ಹಾಗೂ ತ್ವರಿತ ವಿಲೇವಾರಿ (ಪೋಕ್ಸೋ) ನ್ಯಾಯಾಧೀಶರಾದ ಕುಮಾರ ಡಿ.ಕೆ. ಅವರು ತೀರ್ಪು ಹೊರಡಿಸಿರುತ್ತಾರೆ. ಪ್ರಕರಣದಲ್ಲಿ ಸರ್ಕಾರದ ಪರವಾಗಿ ಪ್ರಧಾನ ಸರ್ಕಾರಿ ಅಭಿಯೋಜಕರಾದ ಬಂಡಿ ಅಪರ್ಣಾ ಮನೋಹರ ಅವರು ವಾದ ಮಂಡಿಸಿದ್ದರು ಎಂದು ನ್ಯಾಯಾಲಯದ ಪ್ರಕಟಣೆ ತಿಳಿಸಿದೆ.

# ಮಾಗಿ ಉಳಿಮೆಯಿಂದಾಗುವ ಪ್ರಯೋಜನ

**ಬಾಗಲಕೋಟೆ :** ಮುಂಗಾರು ಹಾಗೂ ಹಿಂಗಾರು ಹಂಗಾಮಿನ ಬೆಳೆಗಳು ಕಟಾವು ಆದ ನಂತರ ಬೇಸಿಗೆ ಹಂಗಾಮಿನಲ್ಲಿ ಇಳಿಜಾರಿಗೆ ಅಡ್ಡಲಾಗಿ ಉಳಿಮೆ ಕಾರ್ಯ ಕೈಗೊಳ್ಳುವುದೇ ಮಾಗಿ ಉಳಿಮೆಯಾಗಿದೆ. ಮಾಗಿ ಉಳುಮೆಯ ಪ್ರಮುಖ ಉದ್ದೇಶಗಳು ಇಂತಿವೆ. ಮಾಗಿ ಉಳುಮೆ ಮಾಡುವುದರಿಂದ ಗಟ್ಟಿಯಾದ ಭೂಮಿಯ ಮೇಲ್ಮೈ ಪದರನ್ನು ಒಡೆದು, ಆಳವಾಗಿ ಹರಿಯನ್ನು ನಿರ್ಮಾಣ ಮಾಡಿ, ಕೆಳಪದರಿನ ಮಣ್ಣನ್ನು ಮೇಲ್ಮೈ ಭಾಗಕ್ಕೆ ಬಂದು ಸೂರ್ಯನ ಶಾಖದ ಪ್ರಖರಕ್ಕೆ ಒಳಗಾಗಿ ಭೂಮಿಯಲ್ಲಿನ ರೋಗಾಣುಗಳ ಸೋಂಕು ನಿವಾರಣೆಯಾಗುತ್ತದೆ. ಅಲ್ಲದೇ ಭೂಮಿಯಲ್ಲಿರುವ ಕೀಟಗಳ ಕೋಶಗಳ ನಾಶವಾಗುತ್ತದೆ.

ಮಣ್ಣಿನ ರಚನೆ ಮತ್ತು ವಿನ್ಯಾಸ ಸುಧಾರಿಸುವುದರಲ್ಲದೇ ಮಣ್ಣಿನಲ್ಲಿ ಗಾಳಿ ಆಡುವಿಕೆ ಉತ್ತಮಗೊಂಡು ಭೂಮಿಯಲ್ಲಿನ ಉಪಕಾರಿ ಸೂಕ್ಷ್ಮಜೀವಿಗಳ ಸಂಖ್ಯೆಯಲ್ಲಿ ವೃದ್ಧಿಗಾಗಿ ಸಾವಯವ ಪದಾರ್ಥಗಳು ಕಳೆತು ಸಾವಯವ ಗೊಬ್ಬರವನ್ನಾಗಿ ಪರಿವರ್ತಿಸಿ ಬೆಳೆಗಳಿಗೆ ಒದಗಿಸಲು ಸಹಕಾರಿಯಾಗುತ್ತದೆ.

ಮಣ್ಣಿನಲ್ಲಿ ನೀರು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಹೆಚ್ಚಾಗುತ್ತದೆ. ಮೊದಲನೇ ಮಳೆಯಿಂದ ಬಂದ ನೀರನ್ನು ತಡೆಗಟ್ಟಿ ಹರಿದು ಹೋಗುವ ಮಣ್ಣು ಮತ್ತು ನೀರು ಸಂರಕ್ಷಣೆಯಾಗುತ್ತದೆ. ಆಳವಾದ ಉಳಿಮೆಯಿಂದ ಕಳೆಗಳ ಪ್ರಮಾಣ ಕಡಿಮೆಯಾಗುತ್ತದೆ ಎಂದು ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# 10 ರಂದು ಲೋಕಾಯುಕ್ತರಿಂದ ಜನಸಂಪರ್ಕ ಸಭೆ

**ಬಾಗಲಕೋಟೆ :** ಜಿಲ್ಲಾ ಲೋಕಾಯುಕ್ತ ಪೊಲೀಸ್ ಅಧೀಕ್ಷಕರಿಂದ ಎಪ್ರೀಲ್ 10 ರಂದು ಬೆಳಿಗ್ಗೆ 10.30 ರಿಂದ ಮಧ್ಯಹ್ನ 1.30 ವರೆಗೆ ಬಾಗಲಕೋಟೆ ತಾಲೂಕಾ ಪಂಚಾಯತ ಕಾರ್ಯಾಲಯದಲ್ಲಿ ಜನಸಂಪರ್ಕ ಸಭೆ ಹಮ್ಮಿಕೊಳ್ಳಲಾಗಿದೆ.

ಸಾರ್ವಜನಿಕರಿಗೆ ಸರ್ಕಾರಿ ಕಚೇರಿಗಳಲ್ಲಿ ಅಧಿಕೃತ ಕೆಲಸಗಳನ್ನು ಮಾಡಿಕೊಡುವಲ್ಲಿ ವಿನಾಕಾರಣ ವಿಳಂಬ ಹಾಗೂ ಇನ್ನಿತರ ತೊಂದರೆ ಆಗಿದ್ದರೆ ಅಂತಹ ಅಧಿಕಾರಿ ಮತ್ತು ನೌಕರರ ವಿರುದ್ಧ ಸಾರ್ವಜನಿಕರು ಜನಸಂಪರ್ಕ ಸಭೆಯಲ್ಲಿ ಲಿಖಿತ ದೂರುಗಳನ್ನು ಸಲ್ಲಿಸಬಹುದಾಗಿದೆ. ಅಲ್ಲದೇ ಸ್ಥಳದಲ್ಲಿಯೇ ಪರಿಹಾರ ಸಹ ಕಂಡುಕೊಳ್ಳಬಹುದಾಗಿದೆ.

ಸದರಿ ಸಭೆಯಲ್ಲಿ ಲೋಕಾಯುಕ್ತ ಇಲಾಖೆಯ ಪೊಲೀಸ್ ಅಧೀಕ್ಷಕ ಸತೀಶ ಚಿಟಗುಬ್ಬಿ, ಉಪಾಧೀಕ್ಷಕ ಸಿದ್ದೇಶ್ವರ, ಪೊಲೀಸ್ ಇನ್ಸಪೆಕ್ಟರ-1 ಎಂ. ಎಚ್.ಬಿದರಿ, ಪೊಲೀಸ್ ಇನ್ಸಪೆಕ್ಟರ-3 ಬಸವರಾಜ ಮುಕರ್ತಿಹಾಳ ಸೇರಿದಂತೆ ಬಾಗಲಕೋಟೆ ತಾಲೂಕಿನ ಎಲ್ಲ ಇಲಾಖೆಯಗಳ ಅಧಿಕಾರಿಗಳು ಉಪಸ್ಥಿತರಿರುವರು ಎಂದು ಲೋಕಾಯುಕ್ತ ಇಲಾಖೆಯ ಪೊಲೀಸ್ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪ್ರಸವಪೂರ್ವ ಲಿಂಗಪತ್ತೆ ಕಾನೂನು ಬಾಹಿರ : ಡಿಸಿ ಟಿ. ಭೂಬಾಲನ್



**ವಿಜಯಪುರ :** ಗಂಡು ಹಾಗೂ ಹೆಣ್ಣಿನ ನಡುವೆ ಸಮಾನ ಅನುಪಾತ ತರುವ ನಿಟ್ಟಿನಲ್ಲಿ ಪ್ರಸವಪೂರ್ವ ಲಿಂಗಪತ್ತೆ ನಿಷೇಧ ಕಾನೂನನ್ನು ಕಡ್ಡಾಯವಾಗಿ ಎಲ್ಲಾ ಸ್ಕ್ಯಾನಿಂಗ್ ಸೆಂಟರ್‌ಗಳು ಪಾಲಿಸತಕ್ಕದ್ದು, ಒಂದುವೇಳೆ ಕಾನೂನು ಬಾಹಿರವಾಗಿ ನಡೆದುಕೊಂಡಲ್ಲಿ ಅಂತವರ ವಿರುದ್ದ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾವುದು ಎಂದು ಜಿಲ್ಲಾಧಿಕಾರಿ ಟಿ. ಭೂಬಾಲನ್ ಎಚ್ಚರಿಕೆ ನೀಡಿದ್ದಾರೆ. ಗುರುವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಪಿಸಿ, ಪಿಎನ್ಡಿಟಿಯು ಜಿಲ್ಲಾ ಸಲಹಾ ಸಮಿತಿ ಸಭೆ ಹಾಗೂ ಜಿಲ್ಲಾ ತಪಾಸಣ ಮತ್ತು ಮೇಲ್ವಿಚಾರಣ ಸಮಿತಿಯ ತುರ್ತುಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸ್ಕ್ಯಾನಿಂಗ್ ಸೆಂಟರ್‌ಗಳು ಪಿಸಿ, ಪಿಎನ್ಡಿಟಿಯು ಕಾಯ್ದೆಗಳ ಅನುಸಾರ ಕಾರ್ಯ ನಿರ್ವಹಿಸಬೇಕು.

ಕಾಯ್ದೆಗಳನ್ನು ಉಲ್ಲಂಘಿಸುವ ಸ್ಕ್ಯಾನಿಂಗ್ ಕೇಂದ್ರಗಳ ಪರವಾನಿಗೆಯನ್ನು ರದ್ದುಗೊಳಿಸಲಾಗುವುದು. ಭ್ರೂಣಲಿಂಗ ಪತ್ತೆ ಮಾಡುವುದು ಅಪರಾಧ ಮತ್ತು ಶಿಕ್ಷಾರ್ಹವಾಗಿದೆ. ಮೊದಲ ಅಪರಾಧಕ್ಕೆ 3 ವರ್ಷ ಜೈಲು ಶಿಕ್ಷೆ ಹಾಗೂ 50 ಸಾವಿರ ದಂಡ ಹಾಗೂ 2ನೇ ಬಾರಿ ಕಾಯ್ದೆ ಉಲ್ಲಂಘಿಸಿದವರಿಗೆ 5 ವರ್ಷ ಜೈಲು ಶಿಕ್ಷೆ ಹಾಗೂ 1 ಲಕ್ಷ ದಂಡ ವಿಧಿಸಲಾಗುತ್ತದೆ. ಮಹಿಳೆಯ ಗಂಡ, ಅತ್ತೆ, ಮಾವ ಹಾಗೂ ಇತರ ಸಂಬಂಧಿಕರು ಭ್ರೂಣಲಿಂಗ ಪತ್ತೆಗೆ ಪ್ರೊ?ರೀತ್ಸಾಹಿಸಿದರೆ ಅವರು ಸಹ ಶಿಕ್ಷೆಗೆ ಗುರಿಯಾಗುತ್ತಾರೆ ಎಂದು ಅವರು ಹೇಳಿದರು.

ಪುರುಷರು ಮತ್ತು ಮಹಿಳೆಯರ ಅನುಪಾತದಲ್ಲಿ ವ್ಯತ್ಯಾಸ ವಾಗದಂತೆ ಮುನ್ನೆಚರಿಕೆಯಾಗಿ ಆರೋಗ್ಯ ಸಂಸ್ಥೆಗಳು, ಗ್ರಾಮಮಟ್ಟದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮಹಿಳಾ ಆರೋಗ್ಯ ಕಾರ್ಯಕರ್ತೆಯರು, ಚುನಾಯಿತಮಹಿಳಾ ಪ್ರತಿನಿಧಿಗಳು ಸಂಘಟಿತರಾಗಿ ಕಾರ್ಯ ನಿರ್ವಹಿಸಬೇಕು ಎಂದರು.

ಇದೇ ವೇಳೆ ವಿಜಯಪುರದ ಜನನಿ ಆಸ್ಪತ್ರೆಯ ಸ್ಕ್ಯಾನಿಂಗ್ ಸೆಂಟರ್ ದಾಖಲಾತಿಗಳನ್ನು ಸರಿಯಾಗಿ ನಿರ್ವಹಿಸುತ್ತಿಲ್ಲ ಎಂಬ ಕಾರಣದಿಂದ ಕಳೆದ 2 ತಿಂಗಳಿನಿಂದ ಅದನ್ನು ಮುಚ್ಚಿಸಲಾಗಿತ್ತು. ಈ ಕಾರಣಕ್ಕೆ ಅವರಿಗೆ ನೋಟಿಸ್ ಕೂಡ ಕೊಡಲಾಗಿದೆ. ಅಲ್ಲಿಯ ವೈದ್ಯರಿಂದ ಸಮಂಜಸವಾದ ಉತ್ತರ ಬಾರದೇ ಇದ್ದಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಸಭೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಬಸವರಾಜ ಹುಬ್ಬಳ್ಳಿ, ಸ್ತ್ರೀರೋಗ ಹಾಗೂ ಪ್ರಸೂತಿ ತಜ್ಞ ಡಾ. ಟಿ.ಪಿ. ನಾಯ್ಡು, ಡಾ. ಎಸ್.ಆರ್.ಬಿದರಿ, ಚಿಕ್ಕಮಕ್ಕಳ ತಜ್ಞ ಡಾ. ರವಿ ನಾಗನೂರ, ವಿಜಯಾ ಬಾಳಿ, ಎಸ್.ಎ. ಶಿವಗೊಂಡ ಉಪಸ್ಥಿತರಿದ್ದರು.

# ಕಾಂಗ್ರೆಸ್ ಅಲ್ಪಸಂಖ್ಯಾತ ಜಿಲ್ಲಾ ಅಧ್ಯಕ್ಷ ಶಫೀಕ್ ಬೇಪಾರಿಗೆ ಸನ್ಮಾನ



**ಮುಧೋಳ :** ಕಾಂಗ್ರೆಸ್ ಅಲ್ಪಸಂಖ್ಯಾತ ಜಿಲ್ಲಾ ಅಧ್ಯಕ್ಷರನ್ನಾಗಿ ಸಫೀಕ್ ಬೇಪಾರಿ ಅವರನ್ನು ಸಚಿವರಾದ ಆರ್ ಬಿ ತಿಮ್ಮಾಪುರ್ ಅವರ ಆದೇಶದ ಮೇರೆಗೆ ಆಯ್ಕೆ ಮಾಡಲಾಗಿದೆ ಆದ್ದರಿಂದ ಅಂಜುಮನ್ ಕಮಿಟಿ ವತಿಯಿಂದ ಸನ್ಮಾನ ಮಾಡಲಾಯಿತು. ಆಯ ಹೆಚ್ ಅಂಬಿ ವಕೀಲರು ಅಂಜುಮನ್‌ಕಮಿಟಿಯಸದಸ್ಯರು ಮಾತನಾಡಿ. ಬಾಗಲಕೋಟೆ ಜಿಲ್ಲೆಯಲ್ಲಿ ಮುಧೋಳ್ ನಗರದ ಶಫೀಕ್ ಬೇಪಾರಿ ಅವರನ್ನು ಆಯ್ಕೆ ಮಾಡಿದ ಕಾಂಗ್ರೆಸ್ ಪಕ್ಷಕ್ಕೆ ಧನ್ಯವಾದಗಳು ಮತ್ತು ಮುಧೋಳಕ್ಕೆ ಸ್ಥಾನ ಕೊಟ್ಟಿದ್ದಕ್ಕಾಗಿ ತುಂಬಾ ಸಂತೋಷವಾಗಿದೆ ಎಂದು ಹೇಳಿದರು. ಶಫೀಕ್ ಬೇಪಾರಿ ಮಾತನಾಡಿ ನಾನು ಕಾಂಗ್ರೆಸ್ ಪಕ್ಷದಿಂದ ಅನುಷ್ಠಾನಗೊಂಡಿರುವ ಎಲ್ಲಾ ಯೋಜನೆಗಳನ್ನು ಎಲ್ಲಾ ಅಲ್ಪಸಂಖ್ಯಾತರಿಗೆ ಮುಟ್ಟಿಸುವ ಕಾರ್ಯ ಮಾಡುತ್ತೇನೆ ಮತ್ತು ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಜಿಲ್ಲೆಯಾದ್ಯಂತ ಸಂಚರಿಸಿ ಅತಿ ಹೆಚ್ಚು ಅಲ್ಪಸಂಖ್ಯಾತರ ಮತದಾನ ಮಾಡಲು ಅಲ್ಪಸಂಖ್ಯಾತರಲ್ಲಿ ಮನವಿ ಮಾಡಿಕೊಂಡು ಕಾಂಗ್ರೆಸ್ ಪಕ್ಷದ ಸಂಯುಕ್ತ ಪಾಟೀಲ್ ಅವರನ್ನು ಗೆಲ್ಲಿಸಲು ಶಕ್ತಿ ಮೀರಿ ಶ್ರಮವಿಸುತ್ತೇನೆ ಎಲ್ಲ ಅಲ್ಪಸಂಖ್ಯಾತರ ಮತ್ತು ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋಗುತ್ತೇನೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಆರಿಫ್ ಮೋಮಿನ್ ಅಂಜುಮನ್ ಅಧ್ಯಕ್ಷರು. ಐ ಹೆಚ್ ಅಂಬಿ ವಕೀಲರು. ಶೈಮುದ್ದೀನ್ ಕರಜಗಿ. ಯುಸೂಫ್ ಜಮಾದಾರ. ರಿಯಾಜ್ ಕಾಲೆಖಾನ. ಕ್ವಾಜಾ ಅಮೀನ್ ಬಾಗವಾನ. ಆರಿಫ್. ಪಠಾಣ ಮೌಲಾ ಸಾರವಾನ್. ಫಜಲ್ ಮೊಮಿನ್. ಬಾನದಾರ್. ಇನ್ನೂ ಮುಂತಾದವರೂ ಉಪಸ್ಥಿತರಿದ್ದರು.

# ಕಾರಂಜಿ ಮಠ, ರುದ್ರಾಕ್ಷಿಮಠದ ಶ್ರೀಗಳ ಆಶಿರ್ವಾದ ಪಡೆದ ಮೃಣಾಲ ಹೆಬ್ಬಾಳಕರ್

**ಬೆಳಗಾವಿ :** ಬೆಳಗಾವಿ ಲೋಕಸಭೆ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮೃಣಾಲ ಹೆಬ್ಬಾಳಕರ್ ಭಾನುವಾರ ಬೆಳಗಾವಿಯ ನಾಗನೂರು ರುದ್ರಾಕ್ಷಿಮಠ ಮತ್ತು ಕಾರಂಜಿ ಮಠಕ್ಕೆ ಭೇಟಿ ನೀಡಿ ಉಭಯ ಶ್ರೀಗಳ ಆಶಿರ್ವಾದ ಪಡೆದರು.

ರುದ್ರಾಕ್ಷಿ ಮಠದ ಶ್ರೀ ಡಾ. ಅಲ್ಲಮಪ್ರಭು ಮಹಾಸ್ವಾಮಿಗಳು ಹಾಗೂ ಕಾರಂಜಿ ಮಠದ ಶ್ರೀ ಗುರುಸಿದ್ಧ ಮಹಾಸ್ವಾಮಿಗಳಿಗೆ ಗೌರವ ಸಮರ್ಪಣೆ ಮಾಡಿದ ಮೃಣಾಲ ಹೆಬ್ಬಾಳಕರ್ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ



ಲಕ್ಷ್ಮೀ ಹೆಬ್ಬಾಳಕರ್, ಶ್ರೀಗಳ ಆಶೀರ್ವಾದ ಹಾಗೂ ಮಾರ್ಗದರ್ಶನ ಪಡೆದರು.

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State